# A Training Package in the Development of Higher Order Skills in Reading and Writing in Mother Tongue at Secondary Level for South Indian Official Languages.

## KANNADA

एन सी ई आर टी
NCERT

REGIONAL INSTITUTE OF EDUCATION, MYSORE

2016

## Acknowledgements

NCERT, New Delhi has given an opportunity to take up this programme and supported in all manners to complete it. I sincerely thank the authorities.
Prof D G Rao, principal RIE, Mysore stood in support and encouraged always in a positive way.

Prof V D Bhatt Dean of Instructions always guided in the task.

Prof G Viswanathappa , Head , DEE, gave a dynamic support and helped in all the needy hours to complete the programme.

Prof K V V L Narasimha Rao and Prof Sam Mohan Lal supported the programme continuously . They provided rich inputs in the material prepared.

Prof M Balakumar and Dr Vijayalakshmi Patil CIIL, Mysore ,

Prof Prema Raghavan, Dr V Prasad, Dr Karunakaran B Shaji, Mr K Suresh Kumar, Dr Sarvesh Mourya from DESSH, RIE Mysore,

Dr Somasekhar, PGT Kannada, DM School,

Dr Sanna Papayya , Guest Faculty in Kannada,

Mr CH V S N Sarma, Mr Rambabu from Andhra Pradesh,

Mr R Raj and Mr A Balakrishnan from Tamil Nadu,

Mr Ranjith Marcose, Sister N C Jessy and M V Mathew from Kerala

extended their kind support in the programme.

I sincerely thank them all.

Programme Co ordinator:

Dr P R Harinath,
Assistant Professor in Telugu,
DESSH, Regional Institute of Education, Mysore

Team members:

Kannada: Dr Vijayalakshmi Patil,
Dr Somasekhar
Dr Sanna Papayya

Malayalam: Mr Ranjith Marcose
Mr M V Mathew
Sister N C Jessy
Dr V Prasad

Tamil : Prof Sam Mohan Lal,
Prof M Balakumar
Mr K Suresh Kumar
Mr R Raj
Mr A Balakrishnan

Telugu:
Dr P R Harinath
Prof K V VL Narasimha Rao
Mr Ch V S N Sharma
Mr Rambabu

## ಓದುವಿಕೆ ಮತ್ತು ಬರವಣಿಗೆ

**ಪೀಠಿಕೆ:**

ಭಾಷೆಯು ಒಬ್ಬ ವ್ಯಕ್ತಿಯ ಭಾವನೆಗಳನ್ನು ಅಥವ ಆಲೋಚನೆಗಳನ್ನು ಗ್ರಹಿಸುವ ಹಾಗೂ ಪ್ರಕಟಿಸುವ ಅರ್ಥಪೂರ್ಣ ಪದ, ವಾಕ್ಯಗಳ ಸಂಗ್ರಹವಾಗಿದೆ. ಮೊದಲಿಗೆ ಭಾಷೆಯು ಕೇವಲ ಮಾತನಾಡಲು ಹಾಗೂ ಕೇಳಿಸಿಕೊಳ್ಳಲು ಮಾತ್ರ ಸೀಮಿತವಾಗಿ ಉಳಿದಿತ್ತು. ಮುಂದಿನ ಅವಧಿಯಲ್ಲಿ ಪ್ರತಿಯೊಂದು ಭಾಷೆಗೂ ಒಂದು ಲಿಪಿಯನ್ನು ರಚಿಸಲಾಯಿತು. ಆಗ ಇನ್ನೇರಡು ಹೊಸ ಕೌಶಲಗಳು ರೂಪಗೊಂಡವು ಅವುಗಳೆಂದರೆ ಓದುವಿಕೆ ಹಾಗೂ ಬರೆವಣಿಗೆ, ಮುಂದಿನ ಶತಮಾನಗಳಲ್ಲಿ ಬರೆವಣಿಗೆಯು ಸಾಹಿತ್ಯ, ಲಿಪಿ ಇನ್ನಷ್ಟು ಸುಧಾರಣೆ ಕಂಡಿತು, ಹಾಗೂ ವಿಸ್ತಾರಗೊಂಡಿತು.

**ಮಾತೃಭಾಷೆ:**

ಮಾತೃ ಭಾಷೆಯನ್ನು ಸಾಮಾನ್ಯವಾಗಿ 'ತಾಯಿನುಡಿ'ಅಂದರೆ ತಾಯಿಯಿಂದ ಕಲಿತುಕೊಂಡ ಭಾಷೆ ಎಂದು ವಿವರಿಸಲಾಗುತ್ತದೆ ಮಗು ತನ್ನ ಪೋಷಕರಿಂದ ಭಾಷೆಯನ್ನು ಕಲಿಯುತ್ತದೆ. ಇಲ್ಲಿ ಮಗು ತನ್ನ ಹೆಚ್ಚಿನ ಸಮಯವನ್ನು ತಾಯಿಯ ಜೊತೆಯಲ್ಲೆ ಕಳೆಯುವುದೇ ಕಾರಣ. ತಾಯಿಯು ಮಗುವಿನ ಭಾಷೆಯ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಾರೆ. ಹೀಗಾಗಿ ಹೆಚ್ಚಿನ ಸಂಖ್ಯೆಯ ಜನರು ಮಾತೃಭಾಷೆಯೆಂದರೆ ತಾಯಿಯಿಂದ ಕಲಿತ ಭಾಷೆ ಎಂದೇ ಭಾವಿಸುತ್ತಾರೆ. ಕೆಲವು ಮಾತೃಭಾಷೆಯನ್ನು ಮಗುವೊಂದು ತನ್ನ ಪೋಷಕರಿಂದ ಕಲಿತ ಭಾಷೆ ಎಂದು ವಿವರಿಸುತ್ತಾರೆ. ಕೆಲವು ಭಾಷಾತಜ್ಞರ ಪ್ರಕಾರ 'ಒಬ್ಬ ವ್ಯಕ್ತಿ ಗಾಢ ನಿದ್ರೆಯಲ್ಲಿರುವಾಗ ಇದ್ದಕ್ಕಿದ್ದ ಹಾಗೆ ಎಚ್ಚರಗೊಳಿಸಿದರೆ ಇಲ್ಲವೇ ಜಿಗುಟಿದರೆ ಅವರು ಮಾತನಾಡುವ ಭಾಷೆಯನ್ನು ಮಾತೃಭಾಷೆ ಎಂದು ಪರಿಗಣಿಸುತ್ತಾರೆ. ಮಾತೃಭಾಷೆಯ ಬಗ್ಗೆ ಇರುವ ಸರಾಸರಿ ಸಾಮಾನ್ಯ ಅಭಿಪ್ರಾಯವನ್ನು ಒಟ್ಟಾರೆಯಾಗಿ ಪರಿಗಣಿಸುವುದಾದರೆ, ಮಾತೃಭಾಷೆಯ ವಿವರಣೆ ಕೇವಲ ಭಾಷಾಸೂಚನೆಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿ ಉಳಿದಿದೆ. ಭಾಷಾತಜ್ಞರು ಮಾತೃ ಭಾಷೆಯನ್ನು ಹೀಗೆ ವಿವರಿಸಿದ್ದಾರೆ. 'ಒಂದು ಮಗು ತನ್ನ ಮನೆಯಲ್ಲಿ, ಶಾಲೆ ಹಾಗೂ ಹೊರಗಡೆ ದೊರೆಯುವ ಪರಿಸರದಿಂದ ಭಾಷಯು ಮಗುವಿನ ಬಾಲ್ಯಾವಸ್ಥೆಯಯಿಂದಲೂ ಅದಕ್ಕೆ ಗರಿಷ್ಠ ಪ್ರಮಾಣದಲ್ಲಿ ಲಭಿಸಿರುತ್ತದೆ. ಹೀಗೆ ಮಗುವಿಗೆ ಶೈಶವಾವಸ್ಥೆಯಿಂದಲೂ ಭಾಷೆಯ ಪರಿಸರ ದೊರೆತ ನಂತರ ಎರಡು-ಮೂರು ವರ್ಷ ವಯಸ್ಸಾದಾಗ ಅದಕ್ಕೆ ಭಾಷೆಯನ್ನು ಮಾತನಾಡುವ, ಗ್ರಹಿಸುವ, ಅರ್ಥಮಾಡಿಕೊಳ್ಳುವ ನೈಪುಣ್ಯತೆಯನ್ನು ಪಡೆಯುತ್ತದೆ. ಈ ಹಂತ ಮಗುವಿಗೆ ಇನ್ನೂ ಔಪಚಾರಿಕ ಶಿಕ್ಷಣ ಪರಿಚಯ ಆಗುವ ಮೊದಲೆ ಉಂಟಾಗಿರುತ್ತದೆ. ಹೀಗಾಗಿ ಮಗುವಿಗೆ ಶಾಲೆಯಲ್ಲಿ ಮಾತನಾಡುವ ಮತ್ತು ಬರೆಯುವ ಕೌಶಲಗೂ ಲಭ್ಯವಾಗುವುದು ಒಂದು 'ಔಪಚಾರಿಕತೆ'ಎಂದು ನಾವು ಭಾವಿಸಬಹುದು. ಭಾಷಾಶಿಕ್ಷಣಕ್ಕೆ ಸಂಬಂಧಿಸಿದಂತೆ ಈ ವಿವರಣೆಯನ್ನು ನಾವು ಮಾತೃಭಾಷೆಗೆ ತಳಕು ಹಾಕಬಹುದು. ಈ ಸಂದರ್ಭದಲ್ಲಿ ನಾವು ಲಘು ಪ್ರಮಾಣದ ವಿವಾದ, ವಿಮರ್ಶೆಗಳನ್ನು ಗಮನದಲ್ಲಿರಿಸಿಕೊಂಡಿರಬೇಕಾಗುತ್ತದೆ. ಭಾಷಾ ತಜ್ಞರು ಹಾಗೂ ವಿಜ್ಞಾನಿಗಳು ಮಾತೃಭಾಷೆಯನ್ನು 'ಆಡು ಭಾಷೆ, ಸ್ಥಾನೀಯ ಭಾಷೆ, ಎಂದು ಕರೆಯಲು ಬಯಸುತ್ತಾರೆ. ಇತರರು ಮಾತೃ ಭಾಷೆಯನ್ನೂ ಮೊದಲ/ಪ್ರಥಮ ಭಾಷೆ ಎಂದು ಕರೆಯಲು ಬಯಸುತ್ತಾರೆ.

**ಪರಕೀಯ ಭಾಷೆ ಹಾಗೂ ದ್ವಿತೀಯ ಭಾಷೆ:**

ದ್ವಿತೀಯ ಭಾಷೆ ಎಂದರೆ ಮಾತೃ ಭಾಷೆಯ ನಂತರ ಕೆಲಮಟ್ಟಿಗೆ ಪರಿಚಿತವಾಗಿರುವ ಭಾಷೆ ಎಂದು ವಿವರಿಸಬಹುದು. ಒಂದು ಮಗುವಿಗೆ ದ್ವಿತೀಯ ಭಾಷೆಯು ಮಾತೃಭಾಷೆಯ ಔಪಚಾರಿಕ ಕಲಿಕೆಯ ಅವಧಿಯಲ್ಲಿಯೇ ಲಭಿಸುತ್ತದೆ. ಹಾಗೂ ಆ ಸಮಯದಲ್ಲಿ ಮಗುವಿಗೆ ಬಾಹ್ಯ ಪ್ರಪಂಚದಲ್ಲಿ ಈ ಎರಡನೇ ಭಾಷೆಯನ್ನು ಸಕ್ರೀಯವಾಗಿ ಉಪಯೋಗಿಸುಲು ಸಾಕಷ್ಟು ಅವಕಾಶಗಳು ದೊರೆತಿರುತ್ತವೆ. ಮುಂದೆ ಈ ಎರಡನೇ ಭಾಷೆಗೆ ಸಂಬಂಧಿಸಿದ ಎಲ್ಲಾ ನೈಪುಣ್ಯತೆಗಳು ಔಪಚಾರಿಕ ಭಾಷಾ ಕಲಿಯುವಿಕೆಯ ಅವಧಿಯಲ್ಲಿಯೇ ಹೆಚ್ಚಾಗಿ ಅಭಿವೃದ್ಧಿ ಹೊಂದಲು ಅವಕಾಶ ಸಿಗುತ್ತದೆ.

ಪರಕೀಯ ಭಾಷೆ ಎಂದರೆ ಮಗು ತರಗತಿಯಲ್ಲಿ ಅಥವ ೪ ಗೋಡೆಗಳ ನಡುವೆ ಕಲಿಸುವ, ಕಲಿಯುವ ಭಾಷೆ ಎಂದು ವಿವರಿಸಲಾಗುತ್ತದೆ. ಈ ರೀತಿಯ ಕಲಿಕೆಯಲ್ಲಿ ಮಗುವಿಗೆ ಆ ೪ ಗೋಡೆಗಳ ಹೊರಗೆ ಈ ಭಾಷೆಯನ್ನು ಉಪಯೋಗಿಸಲು ಯಾವುದೇ ರೀತಿಯ ಅವಕಾಶಗಳು ಸಿಗುವುದಿಲ್ಲ.

**ಪ್ರಾಥಮಿಕ ಶಾಲಾ ಹಂತದಲ್ಲಿ ಮಾತೃ ಭಾಷೆಯ ಬೋಧನೆ:**

ಒಂದು ಮಗು ಪಠ್ಯ ವಿಷಯವನ್ನು ಸುಲಭವಾಗಿ ಕಲಿಯಲು ಉಪಯೋಗವಾಗುವ ಭಾಷೆ ಎಂದರೆ ಅದರ ಮಾತೃ ಭಾಷೆ ಮಗುವಿಗೆ ತನ್ನ ಮಾತೃ ಭಾಷೆಯ ಕಲಿಯುವಿಕೆಯು ಎಂದಿಗೂ ಅಡಚಣೆ, ಕಷ್ಟದಿಂದ ಕೂಡಿದೆ ಎಂದ ಭಾವನೆ ಬರುವುದಿಲ್ಲ. ಅದು ಮಾತೃ ಭಾಷೆಯ ಕಲಿಯುವಿಕೆಯನ್ನು ಒಂದು ಸಂತೋಷದ ವಿಷಯವನ್ನಾಗಿ ಭಾವಿಸುತ್ತದೆ.

**ಬರೆವಣಿಗೆಯ ನೈಪುಣ್ಯತೆಯನ್ನು ಅಭಿವೃದ್ಧಿ ಪಡಿಸುವುದು:**

ಭಾಷೆಗಳು ನೈಪುಣ್ಯತೆಗಳನ್ನು ಅಭಿವೃದ್ಧಿಪಡಿಸುವ ತಂತ್ರಗಳು ಹಾಗೂ ಕ್ರಮಗಳು ಸಾಮಾನ್ಯವಾಗಿ ಬೋಧನೆಯ ಹಂತವನ್ನು ಅವಲಂಬಿಸಿರುತ್ತವೆ. ಒಂದು ಅಭಿಪ್ರಾಯದ ಪ್ರಕಾರ ವಿದ್ಯಾರ್ಥಿಗಳು ಶಾಲೆಯಲ್ಲಿ ಓದಲು ಹಾಗೂ ಬರೆಯಲು ಚೆನ್ನಾಗಿ ಕಲಿತಿದ್ದರೂ ಸಹ ಪರಿಣಾಮಕಾರಿ ಮತ್ತು ಅರ್ಥಪೂರ್ಣ ಸಂಪರ್ಕ ಜಾಲದ ದೃಷ್ಠಿಕೋನದಿಂದ ಪರಿಶೀಲಿಸಿದಾಗ ಈ ರೀತಿಯ ಕಲಿಯುವಿಕೆ ಆ ಮಕ್ಕಳಲ್ಲಿ ಸಂಪೂರ್ಣವಾಗಿರುವುದಿಲ್ಲ ಎಂಬ ವಿಚಾರ ತಿಳಿಯುತ್ತದೆ. ಇಲ್ಲಿ ಪ್ರಾಥಮಿಕ ಹಂತದಲ್ಲಿ ಶಾಲೆಯ ವಿದ್ಯಾರ್ಥಿಗಳು ಓದಲು ಹಾಗೂ ಬರೆಯಲು ಕೆಲವು ಸಾಮರ್ಥ್ಯಗಳು ಅಗತ್ಯವಿರುತ್ತವೆ. ಅವುಗಳೆಂದರೆ.....

**ಓದುವಿಕೆ:**

ಇದು ಸಾಮಾನ್ಯವಾಗಿ ೨ ವಿಧಗಳನ್ನು ಒಳಗೊಂಡಿದೆ.


೧. ಮೌನವಾಗಿ ಓದುವುದು
೨. ಜೋರಾಗಿ ಓದುವುದು

ಮೌನವಾದ ಓದುವಿಕೆ ಮುದ್ರಿತ ಪತ್ಯ, ಪದಗಳ ಚಲನೆಯನ್ನು ಒಳಗೊಂಡಿರುತ್ತದೆ. ಹಾಗೂ ಇಲ್ಲಿ ಯಾವ ರೀತಿಯ ಶಬ್ಧಗಳು ಹೊರಬರುವುದಿಲ್ಲ ಮತ್ತು ತುಟಿಗಳ ಚಲನೆ ಇರುವುದಿಲ್ಲ. ಈ ರೀತಿಯ ಓದುವಿಕೆಯು ಸಶಬ್ಧ ಅಥವ ಜೋರಾಗಿ ಓದುವುದಕ್ಕಿಂತ ಹೆಚ್ಚು ಉತ್ತಮ ಹಾಗೂ ಫಲಕಾರಿ ಎಂದು ಭಾಷಾ ತಜ್ಞರು ಹಾಗೂ ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ಈ ರೀತಿಯ ಓದುವಿಕೆಯಿಂದ ವಿದ್ಯಾರ್ಥಿಗಳು ವಿಷಯವನ್ನು ಹೆಚ್ಚು ಸುಲಭವಾಗಿ ಕಲಿಯಲು ಅವಕಾಶ ದೊರೆಯುತ್ತದೆ. ಹಾಗಿದ್ದರೂ ಸಹ ಈ ರೀತಿಯ ಕಲಿಯುವಿಕೆ ಶಾಲಾ ಶಿಕ್ಷಕರಿಗೆ ಹೆಚ್ಚಾಗಿ ನೆರವಾಗಲು ಸಾಧ್ಯವಿಲ್ಲ.

ಪರಿಣಾಮಕಾರಿ ಓದುವಿಕೆಯ ಒಬ್ಬ ವ್ಯಕ್ತಿಯ ವೇಗವಾಗಿ ಓದುವ ಸಾಮರ್ಥ್ಯ ಹಾಗೂ ಅದೇ ಸಮಯದಲ್ಲಿ ಸುಧಾರಿತ ಮಟ್ಟದ/ಉನ್ನತ ಮಟ್ಟದ ಗ್ರಹಣ ಸಾಮರ್ಥ್ಯವನ್ನು ಉಲ್ಲೇಖಿಸುತ್ತದೆ. ಉತ್ತಮ ರೀತಿಯ ಓದುವಿಕೆಯನ್ನು ಕಲಿಯಲು ಬಹಳ ವರ್ಷಗಳ ಹಿಂದಿನಿಂದಲೂ ಹಲವು ರೀತಿಯ ಬೋಧನ ಸಾಧನ ಸಲಕರಣೆಗಳು ಜನರ ಬಳಕೆಗಾಗಿ ಲಭಿಸುತ್ತವೆ. ಆದರೆ ವಿಷಾದದ ವಿಷಯವೆಂದರೆ ಅವುಗಳನ್ನು ಜನರು ನಿರೀಕ್ಷಿತ ಪ್ರಮಾಣದಲ್ಲಿ ಸಕ್ರೀಯವಾಗಿ ಉಪಯೋಗಿಸುತ್ತಿಲ್ಲ, ಈ ಪರಿಸ್ಥಿತಿ ಪ್ರಪಂಚದ ಮಟ್ಟಕ್ಕಿಂತಲೂ ಭಾರತದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ.


ಈ ರೀತಿಯ ಉಪಯೋಗಕ್ಕಾಗಿ ಭಾಷಾ ತಜ್ಞರು ಹಾಗೂ ವಿಜ್ಞಾನಿಗಳು ವಿನ್ಯಾಸಗೊಳಿಸಿರುವ ಕೆಲವು ಸಾಧನಗಳ ಬಗ್ಗೆ ಕಿರು ಪರಿಚಯವನ್ನು ಕೆಳಗೆ ವಿವರಿಸಲಾಗಿದೆ.

**ಲಿಂಗ್ವಾ ಫೋನ್: (Lingua Phone)**



ಈ ಉಪಕರಣದಲ್ಲಿ ವಿದ್ಯಾರ್ಥಿಯು ಸಾಂಪ್ರದಾಯಿಕ ರೀತಿಯ ಲಾಂಗ್ವೇಜ್ ಲ್ಯಾಬ್ (Language lab) ನೊಂದಿಗೆ ನೀಡಿರುವ ಹೆಡ್‌ಸೆಟ್ (Head set)ನ್ನು ಬಳಸುತ್ತಾರೆ. ಇಲ್ಲಿ ಹೆಡ್‌ಸೆಟ್ ಬಳಸುವುದರಿಂದ ವಿದ್ಯಾರ್ಥಿಗೆ ಹೊರಗಿನ ಶಬ್ಧಗಳಿಂದ ಯಾವುದೆ ರೀತಿಯ ಅಡಚಣೆ ಉಂಟಾಗಲಾರದು ಹೀಗಾಗಿ ಇಲ್ಲಿ ವಿದ್ಯಾರ್ಥಿಯು ಬೋಧಿಸುತ್ತಿರುವ ಪದಗಳನ್ನು ಹೆಚ್ಚು ಸ್ಪಷ್ಟವಾಗಿ ಗ್ರಹಿಸಲು ಸಾಧ್ಯವಾಗುತ್ತದೆ. ಲಾಂಗ್ವೇಜ್ ಲ್ಯಾಬ್‌ನಲ್ಲಿರುವ ಪ್ರಮುಖ ಸಲಕರಣೆ ಯಾವುದೆಂದರೆ 'ಪ್ಲೇಬ್ಯಾಕ್'ಸೌಲಭ್ಯವನ್ನು ಒಳಗೊಂಡಿರುವ ಒಂದು ಟೇಪ್ ರೆಕಾರ್ಡರ್, ಇದು ಆಡಿಯೋ ಪ್ಯಾಸಿವ್, (Audio Passive) ಆಡಿಯೋ ಆಕ್ಟಿವ್ (Audio Active) ಇವು ಹೋಲಿಕೆಯ ಬೋಧನೆಗಾಗಿ ಉಪಯೋಗಿಸಲ್ಪಡುತ್ತದೆ. ಲಿಂಗ್ವಾಫೋನ್ ನಂತರ ಈಒ, ಟ್ರಾನ್ಸ್‌ಮೀಟರ್, ರಿಸೀವರ್, ಟೇಪ್


ರೆಕಾರ್ಡರ್ ಹಾಗೂ ಆ್ಯಂಟನಾ ಇವುಗಳನ್ನು ಒಳಗೊಂಡಿರುವ ಆಡಿಯೋ ಪ್ಯಾಸೀವ್, ಲಾಂಗ್ವೇಜ್ ಲ್ಯಾಬ್‌ಗಳು ಬಳಕೆಗೆ ಬಂದವು. ಈವುಗಳನ್ನು ಇಡೀ ತರಗತಿಯಲ್ಲಿ ಬಳಸಲು ಸಾಧ್ಯವಿತ್ತು. ಇದರಿಂದ ವಿದ್ಯಾರ್ಥಿಗಳು ರಿಸೀವರ್‌ಗೆ ಸಂಪರ್ಕಸಿರುವ ಹೆಡ್‌ಸೆಟ್‌ನ ಮೂಲಕ, ಟ್ರಾನ್ಸ್‌ಮಿಟ್ಟರ್ ಮೂಲಕ ಪ್ರಸಾರವಾದ ವಾಕ್ಯ/ಪದಗಳನ್ನು ಕೇಳಿಸಿಕೊಳ್ಳಬಹುದಾಗಿತ್ತು. ಈ ರೀತಿಯ L L ಜಾಲದಲ್ಲಿ ಶಿಕ್ಷಕ/ಬೋಧಕರ ಮೂಲಕ ತರಗತಿಯಲ್ಲಿ ಬೋಧನೆಗೆ ಆಸ್ಪದವಿರಲಿಲ್ಲ. ಇದೇ ಉದ್ದೇಶಕ್ಕಾಗಿ ಬಳಕೆಗೆ ಬಂದ ಇನ್ನೊಂದು ಸಾಧನವೆಂದರೆ ವೈರ್ಡ್ ಲಾಂಗ್ವೇಜ್ ಲ್ಯಾಬ್ (Wired Langauage lab). ಈ ಸಾಧನದಲ್ಲಿ ಒಂದು 'ಮಾಸ್ಟರ್ ಕನ್‌ಸೋಲ್'ಇದ್ದು ಇದರಿಂದ ವೈರುಗಳ ಮೂಲಕ ವಿದ್ಯಾರ್ಥಿಗಳು ಬೂತು (Booths) ಗಳಿಗೆ ಸಂಪರ್ಕ ಸಾಧ್ಯವಾಗುತಿತ್ತು. ಈ ಸಾಧನವನ್ನು ಆಡಿಯೋ ಆ್ಯಕ್ಟಿವ್ ಕಂಪಾರೇಟಿವ್ ಲಾಂಗ್ವೇಜ್ ಲ್ಯಾಬ್ (Audio-Active- Comparative Language Lab) ಎಂದೂ ಸಹ ಕರೆಯಲಾಗುತ್ತಿತ್ತು.



Audio-Active- Comparative Language Lab

ಲಾಂಗ್ವೇಜ್ ಲ್ಯಾಬ್ ಒಂದು ತಾಂತ್ರಿಕ ಸಾಧನ, ಇದನ್ನು ಬೋಧನಾ ಸಾಮಗ್ರಿಯಾಗಿ ಬಳುಸತ್ತಾರೆ. L L ನಲ್ಲಿ ಒಂದು ಸೋರ್ಸ್ ಯುನಿಟ್ (Source Unite) ಇದ್ದು, ಇದು ಯಾವುದೇ ರೀತಿಯಲ್ಲೂ ವಿದ್ಯಾರ್ಥಿಗಳಿಗೆ ಅಡಚಣೆ ಉಂಟಾಗದ ಹಾಗೆ, ಯಾವುದೇ ರೀತಿಯ ಸಂಪರ್ಕ ಇಲ್ಲದ ಹಾಗೆ ಆಡಿಯೋ ಸಾಮಾಗ್ರಿಗಳನ್ನು ಎಷ್ಟು ಸಂಖ್ಯೆಯಲ್ಲಿ ಬೇಕಾದರೂ ಪ್ರತ್ಯೇಕವಾಗಿ ಪ್ರಸಾರ ಮಾಡುತ್ತಾರೆ. L L ನ ಪ್ರಮುಖ ಉದ್ದೇಶವೆಂದರೆ, ವಿದ್ಯಾರ್ಥಿಗಳು ಭಾಷೆಯನ್ನು ಉತ್ತಮ ರೀತಿಯಲ್ಲಿ ಕಲಿಯಲು ಹಾಗೂ ಹೆಚ್ಚು ಕ್ರಿಯಾಶೀಲ ರೀತಿಯಲ್ಲಿ ಮತ್ತು ಸ್ವತಂತ್ರವಾಗಿ ಭಾಗಿಯಾಗಲು ಅವಕಾಶ ಮಾಡಿಕೊಡುವ ಆಡಿಯೋ ಲಿಂಗಾವಲ್ (ಶ್ರಮಣ ಮಾಧ್ಯಮದ ಮೂಲಕ ಭಾಷೆಯ ಕಲಿಕೆ) ಚಟುವಟಿಕೆಗಳಿಗೆ ಪ್ರತಿಕ್ರಿಯಿಸಲು ಹಾಗೂ ಅವುಗಳನ್ನೂ ಕೇಳಿಸಿಕೊಳ್ಳಲು ನೆರವಾಗುವುದು. ಐ.ಐ ನಲ್ಲಿ ಬೋಧನಾ/ಪಠ್ಯ ಸಾಮಗ್ರಿಯ ಶಿಕ್ಷಕ/ಬೋಧಕರ ಮೂಲಕ ಅವರ ಆದೇಶದ ಮೇರೆಗೆ ಪಠ್ಯ ಚಟುವಟಿಕೆಗಳಲ್ಲಿ ಸಕ್ರೀಯವಾಗಿಲ ಪಾಲ್ಗೊಂಡಿರುವ, ಕೇಳಿಸಿಕೊಳ್ಳುತ್ತಿರುವ ಹಾಗೂ ಭಾಗಿಯಾಗಿರುವ ವಿದ್ಯಾರ್ಥಿಗಳಿಗೆ ದೊರೆಯುತ್ತದೆ. ಈ ರೀತಿಯ L.Lಗಳಲ್ಲಿ ೨ ರೀತಿಯ ಟ್ರಾಕ್ (Track) ಗಳಿರುತ್ತವೆ. ಇದರಲ್ಲಿ ಮೇಲಿನ ಟ್ರಾಕ್ (Upper Track) ವಿದ್ಯಾರ್ಥಿಗಳ ಪ್ರತಿಕ್ರಿಯೆಗಾಗಿ ಕೆಳಗಿನ ಟ್ರಾಕ್ (Lower Track) ವಿದ್ಯಾರ್ಥಿಗಳ ಪ್ರತಿಕ್ರಿಯೆಗಾಗಿ ಬಳಕೆಯಾಗುತ್ತದೆ. ಇಲ್ಲಿ ಶಿಕ್ಷಕರು ತಮ್ಮ ಕನ್‌ಸೋಲ್ (Console) ಮೂಲಕ ಪಠ್ಯ ಯೋಜನೆಗಳನ್ನು ಪ್ರಸಾರ ಮಾಡಲು, ತರಗತಿಯ

ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ವಿಂಗಡಿಸಲು ಹಾಗೂ ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಪ್ರತ್ಯೇಕವಾಗಿ ಸಂಪರ್ಕಿಸಲು, ನಿಯಂತ್ರಿಸಲು ಹಾಗೂ ಆರಿಸಲಾದ ಗುಂಪಿನೊಂದಿಗೆ ಅಥವ ಇಡೀ ತರಗತಿಯ ವಿದ್ಯಾರ್ಥಿಗಳೊಂದಿಗೆ ಸಂಪರ್ಕ ಹೊಂದಲು ಮತ್ತು ವಿದ್ಯಾರ್ಥಿಗಳಿಗೆ ಸಲಹೆ-ಸೂಚನೆ ನೀಡಲು, ಅವರ ತಪ್ಪುಗಳನ್ನು ಸರಿಪಡಿಸಲು ಹಾಗೂ ಅವರ ಉತ್ತರ/ಪ್ರತಿಕ್ರಿಯೆಗಳನ್ನು ದಾಖಲಿಸಲು (Record) ಅವಕಾಶವಿರುತ್ತದೆ.



**Analog language laboratory**



**Multi media language laboratory**



**EdisonPhonograph**


ಇಲ್ಲಿ ವಿದ್ಯಾರ್ಥಿಗಳಿಗೆ ನಿಯಂತ್ರಣಾ ವ್ಯವಸ್ಥೆಯನ್ನು (Control Facility) ಕೊಟ್ಟಾಗ ಮಾತ್ರ ತಮ್ಮ ಟೇಪ್ ರೆಕಾರ್ಡ್‌ನ್ನು ಉಪಯೋಗಿಸಲು ಸಾಧ್ಯವಾಗುತ್ತದೆ. ಹೀಗೆ ವಿದ್ಯಾರ್ಥಿಗಳಲ್ಲಿ ಕಂಟ್ರೋಲ್ ವ್ಯವಸ್ಥೆಯನ್ನು ಒದಗಿಸಿದ ನಂತರ ಅವರು ತಮಗೆ ಸಾಧ್ಯವಿರುವ ವೇಗದಲ್ಲಿ (Possible pace) ಭಾಷೆಯ ಕಲಿಕೆಯನ್ನು ಅಭ್ಯಸಿಸಲು ಅವಕಾಶ ಸಿಗುತ್ತದೆ. ಹೀಗಾಗಿ ಈ ರೀತಿಯ ಕಲಿಕೆಯನ್ನು ಐಚ್ಛಿಕ ವೇಗದ ಕಲಿಕೆ (Self paced learning) ಎಂದು ಕರೆಯಲಾಗುತ್ತದೆ.

**ರೀಡಿಂಗ್ ಆಕ್ಸಲ ರೇಟರ್: (Reading Accelerator)**



ರೀಡಿಂಗ್ ಆಕ್ಸಲರೇಟರ್ ಒಂದು ಸರಳ ರೀತಿಯ ಉಪಕಣ ಇದರ ಗಾತ್ರ ಕೂಡ ಚಿಕ್ಕದಾಗಿದ್ದು ವಿದ್ಯಾರ್ಥಿಗಳು ಇದನ್ನು ತಮ್ಮ ಪುಸ್ತಕಗಳೊಂದಿಗೆ ಸುಲಭವಾಗಿ ತರಬಹುದಾಗಿದೆ. ಇದರಲ್ಲಿರುವ ಆಡ್ಜಸ್ಟರ್ (Adjustable bar) ನಿಂದಾಗಿ ವಿದ್ಯಾರ್ಥಿಗಳು ಇನ್ನಷ್ಟು ಉತ್ತಮ ರೀತಿಯಲ್ಲಿ ಓದಲು ಸಾಧ್ಯವಾಗುತ್ತದೆ.

**ಕಂಟ್ರೋಲ್ಡ್ ರೀಡರ್ (Controled Reader)**




ಕಂಟ್ರೋಲ್ಡ್ ರೀಡರ್ ಉಪಕರಣದ ನೆರವಿನಿಂದ ವಿದ್ಯಾರ್ಥಿಗಳಿಗೆ ಓದುವ ವಾಕ್ಯ/ಪಠ್ಯವನ್ನು ಬೇಕಾದ, ನಿರ್ದಿಷ್ಟ ವೇಗದಲ್ಲಿ ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಹಾಗೂ ಒಂದು ಸಾಲಿನ ನಂತರ ಇನ್ನೊಂದು ಸಾಲು ಬರುವ ಹಾಗೆ ವ್ಯವಸ್ಥೆ ಮಾಡಬಹುದು. ಕಂಟ್ರೋಲ್ಡ್ ರೀಡರ್ ಉಪಕರಣವನ್ನು

ಪ್ರತಿ ನಿಮಿಷಕ್ಕೆ ೬೦ ರಿಂದ ೧೦೦೦ ಪದಗಳು ಬರುವ/ಚಲಿಸುವ ವೇಗದಲ್ಲಿ ಪತ್ರ/ವಾಕ್ಯಗಳು ಬರುವ ಹಾಗೆ ಸ್ವಯಂ ಚಾಲಿತ ರೀತಿಯಲ್ಲಿ ಪ್ರೀಸೆಟ್ (Pre set) ಮಾಡಬಹುದಾಗಿದೆ.

ಒಂದು ಪರಕೀಯ/ಅಪರಿಚಿತ ಭಾಷೆಯನ್ನು ಬೋಧಿಸಲು ಯಾಂತ್ರಿಕ ರೀತಿಯ L.L ಗಳು ಉಪಯೋಗಿಸುತ್ತಿರುವ ಸಮಯದಲ್ಲೆ ಇನ್ನಷ್ಟು ಸುಧಾರಿತ ರೀತಿಯ ಬೋಧನಾ ಸಾಧನೆಗಳು ಬಳಕೆಗೆ ಬಂದವು. ಇಲ್ಲಿ ಈ ರೀತಿಯ ನಿರ್ದಿಷ್ಟ ಉದ್ದೇಶಕ್ಕಾಗಿ ಹಲವಾರು ಸಾಧನಗಳನ್ನು ವಿಜ್ಞಾನಿಗಳು ವಿನ್ಯಾಸಗೊಳಿಸಿ ಬಿಡುಗಡೆ ಮಾಡಿದ್ದಾರೆ. ಈ ರೀತಿಯ ಸಾಧನಗಳಲ್ಲಿ ಪ್ರಮುಖವೆಂದರೆ ಮೆಟ್ರನೋಸ್ಕೋಪ್ (Metrono scope) ಹಾಗೂ ಕಂಟ್ರೋಲ್ಡ್ ರೀಡರ್ (Controlled Reader) ಫಿಲ್ಮ್ ವೀವರ್, ರೀಡಿಂಗ್ ಆಕ್ಸಲರೇಟರ್ (Accelerator) ಇತ್ಯಾದಿ, ಈ ರೀತಿಯ ಸಾಧನಗಳಿಂದ ವಿದ್ಯಾರ್ಥಿಗಳಲ್ಲಿದ್ದ ನಿಧಾನಗತಿಯ ಕಲಿಕೆ ಕಣ್ಮರೆಯಾಗುತ್ತದೆ. ಹಾಗೂ ಅವರ ಕಣ್ಣುಗಳ ಚಲನೆ ಹೆಚ್ಚು ಚುರುಕಾಗಲು ಅವಕಾಶ ದೊರೆಯುತ್ತದೆ.

**ಟಾಚಿಸ್ಟೋ ಸ್ಕೋಪ್: (Tachisto Scope)**




ಈ ಪದ ಗ್ರೀಕ್ ಭಾಷೆಯ 'ಟಾಚಿ'ಯಿಂದ (Tachy) ಉತ್ಪತ್ತಿಯಾಗಿದೆ. ಟಾಚಿ ಎಂದರೆ 'ವೇಗ' ಹಾಗೂ ಸ್ಕೋಪಿಯನ (Scopian) ಎಂದೆ ನೋಡಲು/ಪರೀಕ್ಷಿಸಲು ಉಪಯೋಗಿಸುವ ಸಾಧನ ಎಂದು ಅರ್ಥ. ಟಾಚಿಸ್ಟೊ ಸ್ಕೋಪ್‌ನಿಂದ ಉತ್ತಮ ರೀತಿಯ ಹಾಗೂ ಲಯಬದ್ಧವಾದ ಓದುವಿಕೆ ಸಾಧ್ಯವಾಗುತ್ತದೆ. ಈ ಉಪಕರಣದ ನೆರವಿನಿಂದ ಪರದೆಯ ಮೇಲೆ ಪದಗಳು ಒಂದರ ಹಿಂದೆ ಒಂದಾಗಿ ಮೂಡುತ್ತವೆ ಹಾಗೂ ಬೇಕಾದ ವೇಗದಲ್ಲಿ ಚಲಿಸುತ್ತದೆ. ಇಲ್ಲಿ ಈ ಚಲನೆಯನ್ನು

ಫಿಲಂ ರೂಪದಲ್ಲಿ ದಾಖಲಿಸಿಕೊಳ್ಳಲು ಸಹ ಅವಕಾಶವಿದೆ. ಇದರ ಕ್ಯಾಮರಾದ ಶಟರ್ ಅನ್ನು ವಿವಿಧ ವೇಗಗಳಿಗೆ ಸೆಟ್ ಮಾಡಬಹುದು. ಸಾಮಾನ್ಯವಾಗಿ ಈ ರೀತಿಯ ಉಪಕರಣಗಳನ್ನು ೨ ರಿಂದ ೦.೦೨ ಸೆಕೆಂಡುಗಳ ಅವಧಿಯಲ್ಲಿ ಅಕ್ಷರಗಳನ್ನು ಚಲಿಸುವ ಉದ್ದೇಶಕ್ಕಾಗಿ ವಿನ್ಯಾಸಗೊಳಿಸಲಾಗಿರುತ್ತದೆ. ಟಾಚಿಸ್ಟೋ ಸ್ಕೋಪ್ ಆಧಾರಿತ ತರಬೇತಿಯಲ್ಲಿ ಕೇವಲ ಒಂದು ಪ್ರಾಥಮಿಕ ದರ್ಜೆಯ ಭಾಷಾ ಕೌಶಲಗಳ ಕಲಿಕೆಗೆ ಮಾತ್ರವೇ ಉಪಯೋಗಿಸುವುದಿಲ್ಲ. ಇದರೊಂದಿಗೆ ಹೆಚ್ಚಿನ ಮಟ್ಟದ ಭಾಷಾ ಕಲಿಕೆಗಾಗಿಯೂ ಸಹ ಬಳಸಲಾಗುತ್ತದೆ.

**ಮೆಟ್ರಾನೋಸ್ಕೋಪ್ (Metrono Scope)**

ಮೆಟ್ರಾನೋಸ್ಕೋಪ್‌ನಲ್ಲಿ ೩ ಶಟರ್‌ಗಳಿದ್ದು ಇದನ್ನು ನಿಯಂತ್ರಿತ ರೀತಿಯ ಓದುವಿಕೆಯನ್ನು (Controlled Reading) ವಿನ್ಯಾಸಗೊಳಿಸಲಾಗಿರುತ್ತದೆ. ಇದರಲ್ಲಿನ ೩ ಶಟರುಗಳನ್ನು ವಿಶೇಷ ರೀತಿಯಲ್ಲಿ ವಿನ್ಯಾಸಗೊಳಿಸಿದ್ದು ಇವು ಒಂದರ ನಂತರ ಒಂದರ ಹಾಗೆ ಎಡದಿಂದ ಬಲಕ್ಕೆ ತೆರೆಯಲ್ಪಡುತ್ತದೆ. ಹಾಗೂ ವಿದ್ಯಾರ್ಥಿಗಳಿಗೆ ಇದೇ ದಿಕ್ಕಿನಲ್ಲಿ ಪದಗಳನ್ನು ಓದಲು ಅನುವುಮಾಡಿಕೊಡುತ್ತದೆ. ಇಲ್ಲಿ ವಿದ್ಯಾರ್ಥಿಗಳು ಓದಬೇಕಾಗಿರುವ ಪಠ್ಯ/ವಾಕ್ಯಗಳು ಒಂದು ರೋಲರ್ (Roller) ಮೇಲೆ ಮುದ್ರಿತವಾಗಿರುತ್ತದೆ. ಈ ರೋಲರ್ ತಿರುಗಿದ ಹಾಗೆ ಅಕ್ಷರದ ಒಂದು ಸಾಲು ನಿರ್ದಿಷ್ಟ ಅವಧಿಯಲ್ಲಿ ಶಟರ್‌ಗಳ ಹಿಂದೆ ಉಳಿದಿರುತ್ತದೆ. ಈ ವ್ಯವಸ್ಥೆಯನ್ನು ನಿರೂಪಣೆಯ ವೇಗವನ್ನು (Demo Speed/ Presentation Speed) ಅತಿ ನಿಧಾನಗತಿಯಿಂದ ಹಿಡಿದು ಅತಿ ವೇಗದ ಗತಿಯವರೆಗೂ ಬೇಕಾದ ವೇಗದಲ್ಲಿ ಬದಲಾಯಿಸಲು ಅವಕಾಶ ಇರುತ್ತದೆ.

**ಫಿಲಂ ಸ್ಟ್ರಿಪ್ ವ್ಯೂವರ್: (Film Strip Viewer)**



The Reading Accelerator

ಇದೂ ಸಹ ಒಂದು ಸರಳ ರೀತಿಯ ಉಪಕರಣವಾಗಿದೆ. ಇಲ್ಲಿ ವಿದ್ಯಾರ್ಥಿಗಳು ಪ್ರತ್ಯೇಕ ರೀತಿಯಲ್ಲಿ ತಮಗೆ ಅಗತ್ಯವಿರುವ ವೇಗದಲ್ಲಿ ಫಿಲಂ ಸ್ಟ್ರಿಪ್‌ಗಳನ್ನು (Film Strip) ನೋಡಲು/ಓದಲು ಸಾಧ್ಯವಾಗುತ್ತದೆ.

ಭಾಷೆಯ ಕಲಿಕೆಯ ಕ್ಷೇತ್ರದಲ್ಲೂ ಸಹ ಡಿಜಿಟಲ್ ಶಕೆ (Digital Era) ಬಹಳ ಕೊಡುಗೆಗಳನ್ನು ನೀಡಿದೆ. ಇದರಲ್ಲಿ ಡಿಜಿಟಲ್ ಅನಲಾಗ್ ಲಾಂಗ್ವೇಜ್ ಲ್ಯಾಬ್ (Digital Analog Languae lab) ಸಹ ಒಂದು. ಈ ಲಾಂಗ್ವೇಜ್ ಲ್ಯಾಬ್‌ನಲ್ಲಿ ಬೋಧಕರ ಕನ್‌ಸೋಲ್ (Console) ನಲ್ಲಿ ಒಂದು ಕಂಪ್ಯೂಟರ್‌ನ್ನು ಅಳವಡಿಸಿರುತ್ತಾರೆ. ಇದರೊಂದಿಗೆ ವಿದ್ಯಾರ್ಥಿಗಳ ಬೂತ್‌ಗಳಲ್ಲಿ

ಅನಲಾಗ್ ಟೇಪ್ ಎಕಾರ್ಡರ್ ಮತ್ತು ಡಬಲ್ ಹೆಡ್ ೨ ಟ್ರಾಕ್ ಕ್ಯಾಸೆಟ್ ರೆಕಾರ್ಡ್‌ಗಳನ್ನು ಅಳವಡಿಸಿರುತ್ತಾರೆ. ಈ ಮೊದಲೇ ವಿವರಿಸಿರುವ ಹಾಗೆ ಈ ಉಪಕರಣ ಇತರ L.L ಗಳ ಹಾಗೆಯೇ ಚಟುವಟಿಕೆಗಳನ್ನು ನಿರ್ವಹಿಸುವುದರ ಜೊತೆಯಲ್ಲಿಯೇ ಕೆಲವು ಹೆಚ್ಚುವರಿ ವಿಶೇಷ ಚಟುವಟಿಕೆಗಳನ್ನು ಸಹಾ ನಿರ್ವಸಹಿಸಬಲ್ಲದು. ಈ L.L ನಲ್ಲಿ ವಿದ್ಯಾರ್ಥಿಗಳನ್ನು ಗುಂಪು ಗುಂಪಾಗಿ ವಿಂಗಡಿಸುವುದರ ಜೊತೆಯಲ್ಲೇ ೩ ರೀತಿಯ ಪೇರಿಂಗ್ ಸೌಲಭ್ಯ (Paring Facility) ವನ್ನೂ ಸಹ ಒಳಗೊಂಡಿದೆ. ಇವು ಯಾವುವೆಂದರೆ.

೧. ಯಾದೃಚ್ಚಿಕ ರೀತಿಯ ಆಯ್ಕೆ (Random Selectiion)

೨. ಕ್ರಮಾನುಗತ ರೀತಿಯ ಆಯ್ಕೆ (Sequential Selection)

೩. ಬೋಧಕರಿಂದ ಆಯ್ಕೆ (Selection by Teacher)

ಇದರೊಂದಿಗೆ ಆಟೋ, ಮಾನಿಟರ್ ಸೌಲಭ್ಯ ಸಹಾ ಲಭ್ಯವಿದ್ದು ಇದರ ನೆರವಿನಿಂದ ಬೋಧಕರು ವಿದ್ಯಾರ್ಥಿಗಳಿಗೆ ಗೊತ್ತಾಗದ ಹಾಗೆ ಅವರ ಚಟುವಟಿಕೆಗಳನ್ನೂ, ಕಲಿಕೆಯನ್ನು ಗಮನಿಸಲು ಸಾಧ್ಯವಾಗುತ್ತದೆ. ಈ L.L ನಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಬೋಧಕರಿಗೂ ಸಹ ತಮ್ಮ ತಮ್ಮ ಹಾಜರಾತಿಯನ್ನು ದಾಖಲಿಸಲು ಬಳಕೆಯಲ್ಲಿರುವ ಪತ್ರ ಸಾಮಾಗ್ರಿಗಳನ್ನೂ ಸಂಗ್ರಹಿಸಿಡಲು ಮೀಡಿಯಾ ಹೌಸನ್ನು ರಚಿಸಲು ಮತ್ತು ಇತರೆ ಉಪಯೋಗಿಗಳಿಗಾಗಿ ಡಾಟಾ ಬೇಸನ್ನು ಗುರುತಿಸಲು ಬುಕ್ ಮಾರ್ಕ್ ಸೌಲಭ್ಯವೂ ದೊರೆಯುತ್ತದೆ. ಈ ಉಪಕರಣದಲ್ಲಿ ಇನ್ನಷ್ಟು ಸುಧಾರಣೆ, ಸಂಶೊಧನೆಗಳು ನಡೆದ ನಂತರ ಹಲವಾರು ಉನ್ನತ ದರ್ಜೆಯ, ದಕ್ಷ, ಕಾರ್ಯಮಟ್ಟ (Sate of the art) ವನ್ನೂ ಹೊಂದಿರುವ ಅತ್ಯಾಧುನಿಕ ರೀತಿಯ L.L ಗಳು ಮಲ್ಟಿ ಮೀಡಿಯಾಗಳು ಈಗ ಬಳಕೆಯಲ್ಲಿರಲು ಸಾಧ್ಯವಾಗಿದೆ.

**ಓದುಗಾರಿಕೆ (Reading)**

ಒಂದು ಭಾಷೆಯನ್ನು ಕಲಿಸುವ ಸಂದರ್ಭದಲ್ಲಿ ಆಲಿಸುವಿಕೆ, ಮಾತುಗಾರಿಕೆ, ಓದುವಿಕೆ ಮತ್ತು ಬರೆಯುವಿಕೆ ಎಂಬ ನಾಲ್ಕು ಕೌಶಲ್ಯಗಳ ಬಗ್ಗೆ ತಿಳಿವಳಿಕೆ ಇರುತ್ತದೆ.

ಓದುವ ಕೌಶಲದ ವಿಸ್ತಾರತೆಯನ್ನು ನೋಡಿದಾಗ ಓದಿದ ವಸ್ತು ವಿಷಯಗಳನ್ನು ಎಷ್ಟರ್ ಅರ್ಥಮಾಡಿಕೊಳ್ಳಬಲ್ಲರು ಎಂಬುದನ್ನು ನಿಖರವಾಗಿ ತಿಳಿಯುವಂತೆ ಮಾಡುತ್ತದೆ. ಆದ್ದರಿಂದಲೇ ಓದುವಿಕೆಯನ್ನು ಜ್ಞಾನ ಭಂಡಾರದ 'ಕೀಲಿಕೈ' ಎಂತಲೂ, ಭಾಷಾಕಲಿಕೆಯ 'ರಾಜಮಾರ್ಗ' ಎಂತಲೂ ಕರೆಯುತ್ತಾರೆ. ಒಂದು ತಿಳಿವಳಿಕೆಯನ್ನು ಪಡೆಯಲು, ವ್ಯಾದಹಾರಿಕ ಜ್ಞಾನವನ್ನು ಪಡೆಯಲು ಮುಖ್ಯ ಸಾಧನವಾಗಿರುವುದಲ್ಲದೆ ಮುಖ್ಯ ವಿಷಯಗಳನ್ನು ಶೀಘ್ರಗತಿಯಲ್ಲಿ ಗ್ರಹಿಸಲು, ಭಾಷೆ ಹಾಗೂ ಶೈಲಿಯನ್ನು ತಿಳಿದುಕೊಳ್ಳಲು, ಗ್ರಂಥದ ವಸ್ತು ವಿಷಯಗಳನ್ನು ಸ್ಪಷ್ಟಪಡಿಸಿಕೊಳ್ಳಲು, ದೈನಿಂದಿನ ವರ್ತಮಾನವನ್ನೂ ತಿಳಿಯಲು ಓದುವಿಕೆಯ ಮುಖ್ಯಪಾತ್ರವನ್ನು ವಹಿಸುತ್ತದೆ. ಅಂದರೆ

ಓದುವಿಕೆಯಿಂದ ಓದಿದ ವ್ಯಕ್ತಿಯಲ್ಲಿ ಉಂಟಾಗುವ ಮಾನಸಿಕ, ಬೌದ್ಧಿಕ ಪರಿಣಾಮ ಪ್ರತಿಕ್ರಿಯೆಗಳಾದ ಆನಂದ, ವಿಶ್ಲೇಷಣೆ, ವಿಮರ್ಶೆ ಮುಂತಾದುವುಗಳಲ್ಲಿ ಓದುಗ ಅನುಭವಿಸುತ್ತಾನೆ.

**ಇಂಥಹ ಓದುವಿಕೆಯಲ್ಲಿ ಸುಮಾರು ಏಳು ವಿಧಗಳನ್ನು ಕಾಣುತ್ತೇವೆ.**

೧. ಬಾಯ್ದೆರೆ ಓದು (Loud Reading)
೨. ಮೌನ ಓದು (Silent eading)
೩. ಸ್ಥೂಲವಾದ ಓದು (Skimming)
೪. ಸೂಕ್ಷ್ಮ ವಾಚನ (Scanning)
೫. ವೇಗ ಓದು (Rapd Reading)
೬. ವಿಮರ್ಶಾತ್ಮಕ ಓದು (Critical Reading)
೭. ಸೃಜನಾತ್ಮಕ ಓದು (Creative Reading)

**ಬಾಯ್ದೆರೆ ಓದು: (Loud Reading)**

ಕೈ ಬರಹ ಅಥವ ಮುದ್ರಿತ ಪುಸ್ತಕವನ್ನು ಓದಿ ಅರ್ಥಮಾಡಿಕೊಳ್ಳುವುದು ಮತ್ತು ಕೇಳುವವರಿಗೂ ಅರ್ಥವಾಗುವ ಹಾಗೆ ಓದುವುದೇ ಬಾಯ್ದೆರೆ ಓದು. ಇದರಲ್ಲಿ ಪ್ರತಿ ಅಕ್ಷರವನ್ನು ಉಚ್ಚರಿಸಿ, ಪದಗಳನ್ನು ವಾಕ್ಯಗಳನ್ನು ಗುರುತಿಸಿ ಓದು ಅರ್ಥಮಾಡಿಕೊಂಡರೆ ಅದು ನಿಜವಥ ಓದು. ಓದುವಾಗ ಮನಸ್ಸನ್ನು ಕೇಂದ್ರೀಕರಿಸಿ ಓದಬೇಕು. ಕತೆ, ನಾಟಕ, ಪ್ರಬಂಧ, ಭಾಷಣ, ವಾರ್ತಾವರದಿ, ಜಾಹಿರಾತುಗಳನ್ನು ಓದುವಾಗ ಓದುಗ ಸೂಕ್ಷ್ಮ ವ್ಯತ್ಯಾಸಗಳನ್ನು ವ್ಯಕ್ತಪಡಿಸಿ ಓದಬೇಕು. ಓದುಗರ ಕಣ್ಮುಂದೆ ಕತೆಯ ಘಟನೆಗಳು ಸಂಭವಿಸುತ್ತಿರುವಂತೆ, ನಾಟಕದ ಪಾತ್ರಗಳು ಅಭಿನಯಿಸುತ್ತಿರುವಂತೆ ಪರಿಣಾಮ ಉಂಟಾಗಬೇಕು. ಅಂದರೆ ಓದುಗನು ಬಾಯಿ ತೆರೆದು ಓದುತತಾ ಪಾತ್ರಗಳ ಸ್ವಭಾವ ಅನುಸರಿಸಿ ಕೋಪ, ಭಯ, ಸಂತೋಷ, ಸಂದೇಹ, ಹಾಸ್ಯ, ಪರಿಹಾಸ್ಯ, ಆಶ್ಚರ್ಯ ಭಾವಗಳನ್ನು ವ್ಯಕ್ತಪಡಿಸಬೇಕು. ಅಲ್ಲದೆ ಭಾವಕ್ಕೆ ಧಕ್ಕೆಯಾಗದಂತೆ, ಅತೀ ವೇಗವೂ ಆಗದಂತೆ, ಅತಿ ನಿಧಾನವೂ ಆಗದಂತೆ ಓದಬೇಕು. ಇಲ್ಲಿ ಮೊದಲು ಶಿಕ್ಷಕರು ಮಾಧರಿಯಾಘಿ ಓದಿ ತೋರಿಸಿ ವಿದ್ಯಾರ್ಥಿಯ ತಪ್ಪುಗಳನ್ನು ಗುರುತಿಸಿ, ಉಚ್ಚಾರ, ಧ್ವನಿಯ ಏರಿಳಿತ, ಒತ್ತುಗಡೆ, ನಿಲುಗಡೆಗಳನ್ನು ಸರಿಯಾಗಿ ಅನುಸರಿಸುವಂತೆ ಸೂಚಿಸಬೇಕು. ಪದ್ಯಗಳಲ್ಲಂತೂ ಪ್ರಾಸ, ಅರ್ಥ, ಒಳಅರ್ಥ, ಧ್ವನಿ, ವರ್ಣನೆ, ಕಲ್ಪನೆಗಳು ಸ್ಪಷ್ಟವಾಗುವಂತೆ ಓದಬೇಕು.

**ಬಾಯ್ದೆರೆ ಓದು: (Loud Reading)**

ಚಟುವಟಿಕೆ:-೧

ಬಯಲಾಟ ಕರ್ನಾಟಕ ಜನಪದ ಕಲೆಗಳಲ್ಲಿ ಅತ್ಯಂತ ವೈವಿಧ್ಯದಿಂದ ಕೂಡಿದ ಗಂಡು ಕಲೆ ಇದರಲ್ಲಿ ಸಾಹಿತ್ಯ, ಸಂಗೀತ, ನೃತ್ಯಗಳು ಮುಪ್ಪರಿಗೊಂಡಿವೆ. ಪ್ರಾಚೀನ ಕಾಲದಿಂದಲೂ ಗ್ರಾಮೀಣರಿಗೆ ಮನರಂಜನೆ ಒದಗಿಸಿಕೊಂಡು ಬರುತ್ತಿರುವ ಹವ್ಯಾಸಿ ಕಲೆ ಬಯಲಾಟ ಸಾಮಾನ್ಯವಾಗಿ ಸುಗ್ಗಿ ಕೆಲಸ ಮುಗಿದ ಆಯ್ಕೆಯಾದ ಕಲಾವಿದರು ಅನೇಕ ತಿಂಗಳ ಕಾಲ ಪ್ರತಿದಿನ ರಾತ್ರಿ ಸೇರಿ ಹಿರಿಯ ಕಲಾವಿದರ ಮಾರ್ಗದರ್ಶನದಲ್ಲಿ ಕಲಿಯುತ್ತಾರೆ. ಬಯಲಾಟ ಕಲಿಸುವವರಿಗೆ 'ಭಾಗವತ' ಎಂದು ಕರೆಯುತ್ತಾರೆ, ಇವರು ಭಾಗವಹಿಸಲು ಆಸಕ್ತ ಉಳ್ಳವರ ವಯೋಗುಣ, ಮೈಕಟ್ಟು, ಕಂಠಗಳಿಗನುಗುಣವಾಗಿ ಪಾತ್ರ ಹಂಚುತ್ತಾರೆ. ಇಲ್ಲಿನ ಸ್ತ್ರೀ ಪಾತ್ರಗಳನ್ನು ಗಂಡಸರೇ ಮಾಡುವುದು ವಿಶಿಷ್ಟ.

ಬಯಲಾಟದ ವೇಷಭೂಷಣಗಳು ವೈವಿಧ್ಯದಿಂದ ಕೂಡಿರುತ್ತವೆ. ಕಿರೀಟ, ಭುಜಕೀರ್ತಿ, ಎದೆಹಾರ, ಎದೆಪದಕ, ನಡುಪಟ್ಟಿ, ವೀರಗಾಸೆ, ಮೇಲಂಗಿ, ಕೈಕಟ್ಟು, ಮುಗುಟ, ವಂಕಿ-ಇವು ಪುರುಷರ ವೇಷಭೂಷಣಗಳು, ಹಗುರವಾದ ಮರ ಅಥವ ರಟ್ಟಿನಿಂದ ಮಾಡಿದ ಕಿರೀಟಕ್ಕೆ ಕಲಾತ್ಮಕ ಬಣ್ಣದ ಸಂಯೋಜನೆಯಿರುತ್ತದೆ. ಭುಜಕೀರ್ತಿ ಅಥವ ಭುಜಕಿರೀಟ ಚಕ್ರಾಕಾರಣವಾಗಿರುತ್ತದೆ. ಕೊರಳಿಗೆ ಮಣಿಹಾರವನ್ನು ಧರಿಸುತ್ತಾರೆ. ಕುತ್ತಿಗೆಯಿಂದ ಎದೆಯ ಸ್ವಲ್ಪ ಕೆಳಭಾಗದವರೆಗೆ ಬರುವ ಎದೆಪದಕ ಚಿತ್ತಾರದಿಂದ ಕೂಡಿದ್ದು ತುದಿಯಲ್ಲಿ ಅಡ್ಡಪಟ್ಟಿಯಿರುತ್ತದೆ. ಈ ಅಡ್ಡಪಟ್ಟಿಯ ತುದಿಗಳಿಗೆ ದಾರ ಜೋಡಿಸಿ ಬೆನ್ನಿಗೆ ಕಟ್ಟಿಕೊಂಡಿರುತ್ತಾರೆ. ನಡುಪಟ್ಟಿಯೂ ಸಹ ಚಿತ್ತಾರದಿಂದ ಕೂಡಿರುತ್ತದೆ. ಮುಂಗೈಗೆ ಕೈಕಟ್ಟನ್ನು ಕಟ್ಟಿರುತ್ತಾರೆ. ಈ ಎಲ್ಲಾ ಭೂಷಣಗಳಿಗೂ ಬೆಳಕಿಗೆ ಹೊಳೆಯುವಂತೆ 'ನಕ್ಕಿಪುಡಿ' ಅಥವ 'ಸುನೇರಿ' ಅಂಟಿಸಿರುತಾರೆ.

(ಹಿಂದೆ ಪಠ್ಯಪುಸ್ತಕವಾಗಿದ್ದ 'ಕನ್ನಡ ಕಸ್ತೂರಿ' ಎಂಬ ೯ನೇ ತರಗತಿಯ 'ದೊಡ್ಡಾಟ' ಎಂಬ ಪಾಟದ ಕೆಲವು ಅಂಶಗಳನ್ನು ಇಲ್ಲಿ ತೆಗೆದುಕೊಳ್ಳಲಾಗಿದೆ)

- ಬೇರೆ ಬೇರೆ ಕಲಾಪ್ರದರ್ಶಗಳನ್ನು ನೋಡಿರಿ
- ನಾಟಕಗಳನ್ನು ನೋಡುವ ಅಭ್ಯಾಸವನ್ನೂ ರೂಢಿಸಿಕೊಳ್ಳು
- ಕಲಾಪ್ರದರ್ಶನದಲ್ಲಿ ನೀವೂ ಅಭಿನಯಿಸಿರಿ.

**ಚಟುವಟಿಕೆ-೨**

**ಹುತ್ತರಿ ಹಬ್ಬ:**

ಹುತ್ತರಿ ಎಂಬ ಪದ ಪುತ್ತರಿ ಎಂಬ ಪದದಿಂದ ಬಂದಿದೆ. ಪುತ್ತರಿ ಎಂದರೆ ಹೊಸ ಅಕ್ಕಿ ಎಂದರ್ಥ. ಗದ್ದೆಯಲ್ಲಿ ಬೆಳೆದ ಹೊಸ ಬತ್ತವನ್ನು ಮನೆಗೆ ತರುವಾಗಿನ ಸಂಭ್ರಮವೇ ಈ ಹುತ್ತರಿ. ಇದು ಸಾಧಾರಣವಾಗಿ ನವೆಂಬರ್ ಅಥವ ಡಿಸೆಂಬರ್ ತಿಂಗಳಲ್ಲಿ ಪೂರ್ಣಿಮೆಯ ದಿನ ನಡೆಯುತ್ತದೆ. ಈ ಹಬ್ಬಕ್ಕೆ ಕೊಡವರು ಮತ್ತೆಲ್ಲಾ ಗ್ರಾಮದವರು ಎಲ್ಲಾ ಸಮಾರಂಭ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾರೆ. ಈ ಸಂದರ್ಭದ ಕೋಲಾಟ ಚೆನ್ನಾಗಿರುತ್ತದೆ. ಕೋಲಾಟ ಆಡುವಾಗ ಆಡುವವರು

ಬಾಯಿತೆರ ಕೊಡುತ್ತಾರೆ. ಅಂದರೆ ಪದ್ಯದ ಧಾಟಿಯಲ್ಲಿ ಒಂದು ಒಕ್ಕಣೆಯನ್ನು ಕೊನೆಯಲ್ಲಿ **'ಪೊಯಿಲೇ' 'ಪೊಯಿಲೇ'** ಎಂದು ಹೇಳಿಕೊಂಡು ಬರುವುದುಂಟು. ಈ ಹುತ್ತರಿಯ ದಿವಸ ದನಕರುಗಳಿಕ್ಕೆಲ್ಲ ಶೃಂಗಾರಮಾಡುತ್ತಾರೆ. ಮನೆಗೆಲ್ಲ ಸುಣ್ಣ ಬಣ್ಣಜ ಮಾಡಿ ತೋರಣ ಕಟ್ಟಿರುತ್ತಾರೆ. ಆ ದಿನಜ ಹುತ್ತರಿಕಕ್ಕೆ, ಹುತ್ತರಿಕುಡಿಕೆ, ಹುತ್ತರಿಚಾಪೆ, ಕತ್ತಿಗಳೆಲ್ಲಾ ಸಿದ್ಧಗೊಳ್ಳುತ್ತವೆ.

ನೆಲ್ಲಕ್ಕಿ ನಡುಬಾಡೆಯಲ್ಲಿ ಜಾಗ ಶುದ್ಧ ಮಾಡಿ ತೂಗು ದೀಪದ ಕೆಳಗೆ ಹುತ್ತರಿಚಾಪೆ ಹಾಸುತ್ತಾರೆ. ಅದರ ಮೇಲೆ ಹುತ್ತರಿ ಪಚ್ಚೆಯದಲ್ಲಿ ಮಾವಿನ ಎಲೆ ಅಶ್ವತ್ಥ ಎಲೆ ಇತ್ಯಾದಿ ಇರುತ್ತವೆ. ಪುತ್ತರಿಕುಕ್ಕೆಯ ತುಂಬ ಬತ್ತ ತುಂಬಿಸುತ್ತಾರೆ. ಅದರ ಮೇಲೆ ಒಂದು ಬಳ್ಳಿಯಲ್ಲಿ ಬತ್ತ, ಅದರ ಮೇಲೆ ಅರ್ಧ ಸೇರಿದಲ್ಲಿ ತುಂಬಿಸಿಡುತ್ತಾರೆ. ನಂತರ ನೆರೆಕಟ್ಟುವ ಸಮಾರಂಭ, ನಂತರ ಫಲಹಾರ, ನಂತರ ಕದಿರು ತೆಗೆಯುವ ಸಮಾರಂಭಕ್ಕೆ ಹೊರಡುತ್ತಾರೆ. ಕತ್ತಿ ತೆಗೆಯಲು ಒಬ್ಬ ನಿಶ್ಚಿತನಾಗುತ್ತಾನೆ. ಅವನು ಕದಿರು ಕೊಯ್ಯುವ ಕತ್ತಿಯನ್ನು ತೆಗೆದುಕೊಳ್ಳುತ್ತಾನೆ. ಒಬ್ಬಜ ಕನ್ಯೆಯುಜ ತಳಿಯಕ್ಕಿ ಬೊಳಕನ್ನು ತೆಗೆದುಕೊಳ್ಳುತ್ತಾಳೆ. ಎಲ್ಲರೂ ಕದಿರು ಕೊಯ್ಯಲು ನಿಶ್ಚಯವಾಗಿರುವ ಗದ್ದೆಗೆ ಹೊರಡುತ್ತಾರೆ. ವಾದ್ಯವೂ ಇವರ ಜೊತೆಗೆ ಇರುತ್ತದೆ. ಕುತ್ತಿಯಲ್ಲಿರುವ ಹಾಲು ಜೇನು ಇತ್ಯಾದಿಗಳನ್ನು ಕದಿರಿನ ಬುಡಕ್ಕೆ ಸುರಿದು ನೆರೆಯನ್ನು ಕದಿರಿನ ಬುಡಕ್ಕೆ ಕಟ್ಟುತ್ತಾರೆ. ಆಗ ಒಂದು ಗುಂಡನ್ನು ಹಾರಿಸಬೇಕು. ಎಲ್ಲರೂ 'ಪೊಲಿ ಪೊಲಿದೇವ' ಎಂದು ಕೂಗುತ್ತಾರೆ.

(ವಿದ್ಯಾರ್ಥಿಗಳು ಗಟ್ಟಿ ಓದು ಉಚ್ಚಾರಣೆಯಲ್ಲಿ ತಪ್ಪುತ್ತಾರೆಂದು ಶಿಕ್ಷಕರು ಗಮನಿಸಬೇಕು)

(ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಂಗವು ಪ್ರಕಟಿಸಿದ, ಕುವೆಂಪುರವರು ಪ್ರಧಾನ ಸಂಪಾದಕರಾದ, 'ಕೊಡವರು' ಎಂಬ ಪುಸ್ತಕ ದಿಂದ ಈ ಲೇಖವನ್ನು ಆಯ್ದುಕೊಳ್ಳಲಾಗಿದೆ.

**ಪ್ರಶ್ನೆಗಳು:**

೧. ಸಂಕ್ರಾಂತಿ ಹಬ್ಬದ ವಿಶೇಷತೆಗಳನ್ನು ಗೆಳೆಯರ ಜೊತೆ ಜೋರಾಗಿ ಓದಿ, ಚರ್ಚಿಸಿ.
೨. ಜನಪದ ಆಟಗಳನ್ನು ಪಟ್ಟಿಮಾಡಿ ಮತ್ತು ಆಡಿ ತಿಳಿಯಿರಿ.
೩. ರಾಷ್ಟ್ರೀಯ ಹಬ್ಬಗಳ ಆಚರಣೆಗಳ ಬಗ್ಗೆ ಸಹಪಾಠಿಗಳ ಜೊತೆ ಚರ್ಚಿಸಿ.

**ಮೌನ ಓದು: (Silent Reading)**

ತುಟಿಗಳನ್ನು ಅಲುಗಿಸದೆ ಲಿಪಿಯನ್ನು ಕಣ್ಣಿನಿಂದ ಗುರಿತಿಸುತ್ತ, ಮನಸ್ಸಿನಲ್ಲೇ ಅರ್ಥಮಾಡಿಕೊಳ್ಳುತ್ತಾ ಓದುವುದೇ ಮೌನ ಓದು. ಓದಿದ ಬಳಿಕ ಗ್ರಹಿಸುವುದರ ಬಗೆಗೆ ಚಿಂತನೋ ಅವಕಾಶವಿರುತ್ತದೆ. ಹೀಗೆ ಓದುವಾಗ ಓದಿದ ವಿಷಯಕ್ಕೆ ಸಂಬಂಧಿಸಿದ ಘಟನೆಗಳನ್ನು ನೆನಪಿಸಿಕೊಂಡು ಓದಿದರೆ ಗ್ರಹಿಕೆ ಇನ್ನೂ ಉತ್ತಮವಾಗಿರುತ್ತದೆ. ಮೌನವಾಗಿ ಓದುವುದರಿಂದ ಧ್ವನ್ಯಾಂಗಗಳಿಗೆ ಆಯಾಸವಾಗದು ಆದ್ದರಿಂದ ವೇಗವಾಗಿ ಓದುವುದು, ಹೆಚ್ಚು ಓದಿ ವಿಷಯ ಗ್ರಹಿಸುವುದು ಸಾಧ್ಯ. ಮೌನವಾಗಿ ಓದಿದ ನಂತರ ಅರ್ಥಗ್ರಹಿಕೆ ವಿಷಯ ತಿಳಿವಳಿಕೆಯ ಆಳವನ್ನು

ಪರೀಕ್ಷಿಸಬಹುದು. ಎಲ್ಲಾ ವಾಚನ ಸಾಮಗ್ರಿಗಳನ್ನು ನಾವು ಒಂದೇ ಬಗೆಯಲ್ಲಿ ಓದುವುದಿಲ್ಲ, ವೃತ್ತ ಪತ್ರಿಕೆ, ಕತೆಪುಸ್ತಕ, ಪಠ್ಯಪುಸ್ತಕದ ಸಾರ, ಜಾಹಿರಾತು ಹಾಗೂ ಪತ್ರಗಳನ್ನು ಓದುವುದಕ್ಕೂ ಪರೀಕ್ಷೆಗೆ ಓದುವುದಕ್ಕೆ ಸಾಕಷ್ಟು ವ್ಯತ್ಯಾಸವಿದೆ.

**ಚಟುವಟಿಕೆ–೧**

ಮಾತೃಭಾಷೆಯ ಕಲಿಕೆ ಮತ್ತು ಬಳಕೆ ಅತ್ಯಂತ ಮಹತ್ವದ್ದು ಬೋಧನೆಗಾಗಿ ಪೂರಕವಾಗಿರಬೇಕಾದುದು ಅಗತ್ಯ. ಪಠ್ಯ ವಿಷಯ ವಿದ್ಯಾರ್ಥಿಗಳಲ್ಲಿ ಸೃಜನಾತ್ಮಕವಾಗಿ ಭಾಷಾ ಬಳಕೆಯ ಸಾಮರ್ಥ್ಯವನ್ನು ಬೆಳೆಸಬೇಕೆಂಬುದು ಅಪೇಕ್ಷಣೆಯ ಈ ಅಪೇಕ್ಷೆ ಸಾಧ್ಯವಾಗಿಸಲು ಬೇಕಾಗಿರುವುದು ಪಠ್ಯದ ಗ್ರಹಿಕೆ ಹಾಗೂ ಕಲಿಕೆ. ಪಠ್ಯ ಜ್ಞಾನಾರ್ಜನೆಯ ಉದ್ದೇಶ ನೆರವೇರಿಸಬೇಕು. ಪಠ್ಯ ಸಿದ್ಧಪಡಿಸುವಾಗ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಅವರಲ್ಲಿರುವ ಅರ್ಥ ಗ್ರಹಿಕೆ, ಒಪ್ಪಣೆ ತಯಾರಿಕೆ, ಭಾಷಾಭ್ಯಾಸ ಇತ್ಯಾದಿಗಳನ್ನು ಅಳವಡಿಸಬೇಕು. ಗದ್ಯ/ಪಠ್ಯ ಪಾಠಗಳು ಆಸಕ್ತಿ ಕುತೂಹಲ ಕೆರಳಿಸುವಂತಿರಬೇಕು. ಅಂದರೆ ಮಾತ್ರ ಪಠ್ಯ ಪುಸ್ತಕಗಳ ತಯಾರಿಕೆ ಪರಿಪೂರ್ಣವಾಗಿ ಯಶಸ್ಸು ಹೊಂದುವುದು.

**ಅಭ್ಯಾಸಗಳು**

೧) ಯಾವ ವಿಷಯದ ಬಗ್ಗೆ ಓದಿದೆ?
೨) ಇದು ಆಸಕ್ತಿಯ ವಿಷಯವೇ?
೩) ನಿಮ್ಮ ಅಭಿಪ್ರಾಯ ತಿಳಿಸಿ.

**ಚಟುವಟಿಕೆ–೨**

ರಂಗಭೂಮಿ ಎಂಬ ಮಾಧ್ಯಮದ ವಿಸ್ತಾರ–ವೈವಿಧ್ಯಗಳನ್ನು ಅರ್ಥಮಾಡಿಕೊಳ್ಳುವಾಗ ಪ್ರಸ್ತುತದ ಜೊತೆ ಜೊತೆಗೆ ಒಂದು ಚಾರಿತ್ರಿಕ ಮಾಹಿತಿ ಕೂಡ ಮುಖ್ಯವಾಗುತ್ತದೆ. ಚಾರಿತ್ರಿಕ ಐತಿಹಾಸಿದ ಅಧ್ಯಯನವೆಂಬುದು ವರ್ತಮಾನವನ್ನು ಅರ್ಥಪೂರ್ಣವಾಗಿ ವಿಸ್ತರಿಸಲಿಕ್ಕೆ ಪೂರಕವಾದ ಒಂದು ಮಾರ್ಗವೆಂದು ಗ್ರಹಿಸಿಕೊಳ್ಳಬಹುದು. ಪ್ರತಿಯೊಂದು ಸಂದರ್ಭವು ಅದು ಸಾಹಿತಿಕ ಸಂದರ್ಭವಾಗಿರಬಹುದು, ಅಥವ ಐತಿಹಾಸಿಕ ಸಂದರ್ಭವಾಗಿರಬಹುದು.

ಒಂದು ನಾಟಕದ ಸಮಕಾಲೀನ ಪ್ರಜ್ಞೆಯನ್ನು ತನ್ನಲ್ಲಿ ಅಂತರ್ಗತ ಮಾಡಿಕೊಂಡಿರುವುದು ಆಯಾ ಸಂದರ್ಭಗಳಲ್ಲಿ ಗ್ರಹಿಕೆಯಾಗಿರುತ್ತದೆ. ಈ ವಿಷಯಗಳನ್ನು ಸ್ಪಷ್ಟಪಡಿಸಲು ಕೆಲವು ಕನ್ನಡ ನಾಟಕಗಳ ತಂತ್ರಗಳಿಂದ ಅವುಗಳು ಪಡೆದುಕೊಂಡು ಪ್ರೇರಣೆಯನ್ನು ಗಮನಿಸುವುದರ ಮೂಲಕ ಗುರುತಿಸಬಹುದು. ಈ ರೀತಿಯ ಗಟ್ಟಿಯಾದ ಸೈದ್ಧಾಂತಿಕ ನಿಲುವುಗಳನ್ನು ಪ್ರತಿಪಾದಿಸಿದ ನಾಟಕಗಳು ಕನ್ನಡ ರಂಗಭೂಮಿಯ ೭೦ ರ ದಶಕದಲ್ಲಿ ಹೆಚ್ಚಾಗಿ ಕಾಣಿಸಿಕೊಂಡವು. ತನ್ನ ರಚನಾ ತಂತ್ರಗಳನ್ನು, ಭಾಷೆಯಲ್ಲಿ ಹಾಗೂ ನಾಟಕ ಕೃತಿಯೊಂದು ರಂಗಕೃತಿಯಾಗುವ ಒಟ್ಟು, ಪ್ರಕ್ರಿಯೆಯಲ್ಲಿಯೇ ಈ

ಒಂದು ಹೊಸ ಅಲೆ ಕಾಣಿಸಿಕೊಂಡಿತು. ಆಧುನಿಕ ಜಾನಪದ ನಾಟಕ ಪರಂಪರೆ ಕನ್ನಡ ರಂಗಭೂಮಿಯನ್ನು ಗಾಢವಾಗಿ ಪ್ರಭಾವಿಸುತ್ತಿದ್ದಂತೆ ಇದುವರೆಗೆ ಹರಿದು ಬಂದಿದ್ದ ಕನ್ನಡ ನಾಟಕಗಳಲ್ಲಿಯ ಸಮಕಾಲಿನ ಪ್ರಜ್ಞೆ ಮತ್ತು ವೈಚಾರಿಕ ನೆಲೆಗಟ್ಟನಲ್ಲಿ ಕಟ್ಟಿದ ಪರಂಪರೆಯು ಕುಸಿದುಬಿಡುವ ಅಪಾಯದಿಂದ ಪಾರಾಗಲು ಅದಕ್ಕೊಂದು ಪರ್ಯಾಯ ಚಿಂತನೆಯು ಕಾಣಿಸಿಕೊಂಡಿತು.

(ಡಾ॥ ಎಚ್.ಕೆ ರಾಮನಾಥ್‌ರವರ ಅಭಿನಂದನೆ ಗ್ರಂಥದ **'ಸಾಮಾಜಿಕ ಚಳುವಳಿಗಳು ಮತ್ತು ಆಧುನಿಕ ಕನ್ನಡ ನಾಟಕಗಳು'** ಎಂಬ ಲೇಖನದಿಂದ ಆರಿಸಲಾಗಿದೆ) (P.N ೩೧೪)

**ಪ್ರಶ್ನೆಗಳು:**

೧) ಈ ಲೇಖನದಲ್ಲಿ ಲೇಖಕರು ಯಾವ ವಿಷಯದ ಬಗ್ಗೆ ಚರ್ಚಿಸಿದ್ದಾರೆ?
೨) ಮೌನವಾಗಿ ಓದಿದ ಈ ಲೇಖನವನ್ನು ಗೆಳೆಯರ ಜೊತೆ ಚರ್ಚಿಸಿ.

**ಸ್ಥೂಲವಾಚನ(ಸ್ಥೂಲವಾದ ಓದು) Skimming:**

ಸ್ಥೂಲವಾದ ಓದು ವಿಷಯದ ಮುಖ್ಯ ಅಂಶಗಳನ್ನು ಗ್ರಹಿಸುವುದಾಗಿದೆ. ಅಂದರೆ ಓದುವುದರಲ್ಲಿರುವಂತಹ ಶೀರ್ಷಿಕೆ, ಉಪಶೀರ್ಷಿಕೆ, ಪೀಠಿಕೆ, ಉದ್ಧರಣೆ ಚಿಹ್ನೆಯಲ್ಲಿರುವ ಮಾಹಿತಿ ಹಾಗೂ ವಿಷಯದ ಉಪಸಂಹಾರವನ್ನು ಓದಿ ಅರ್ಥಮಾಡಿಕೊಳ್ಳುವುದು. ಈ ರೀತಿಯ ಓದಿನಿಂದ ವಿಷಯದ ಸ್ಥೂಲ ಅರ್ಥವನ್ನಷ್ಟೇ ಗ್ರಹಿಸಬಹುದು. ಇದರಲ್ಲಿ ಅಡಗಿರುವ ಅಲ್ಪ ಮಹತ್ವವುಳ್ಳ ಸೂಕ್ಷ್ಮ ವಿಷಯಗಳನ್ನು ಅರಿಯಲು ಸಾಧ್ಯವಾಗುವುದಿಲ್ಲ ಇದರಿಂದಾಗಿ ವಿಷಯದ ವಿಸ್ತೃತ ಅಥವ ಸಮಗ್ರ ಮಾಹಿತಿಯನ್ನು ಅರ್ಥ ಮಾಡಿಕೊಳ್ಳಲು ಯಾವುದೇ ತೊಂದರೆ ಉಂಟಾಗುವುದಿಲ್ಲ.

**ಸ್ಥೂಲವಾಚನ (Skimming)**

ಚಟುವಟಿಕೆ–೧

**ಸಂಜೆ ಬದುಕು**

ನಡೆಯಲಾರದೆ ಅಡವಿ ಬಿದ್ದು

ಏಳಲಾರದೆ ತೆವಳಿ ತೆವಳಿ

ಒಂದು ತುತ್ತಿಗೆ ಒಂದು ಕಾಸಿಗೆ

ಊರೆಲ್ಲಾ ಅಲೆದು

ಕಣ್ಣೀರ ಬಸಿಯುವಳು

ಮಕ್ಕಳ ಹೆತ್ತ ಹಣ್ಣು ಮುದುಕಿ....

ಮಕ್ಕಳಿರುವರು

ಗಂಡು ಮಕ್ಕಳೇ ಇರುವರು

ಇಕ್ಕುವುದರಿಲಿ. ನೋಡರೂ ಕೂಡ ಇವಳ ಕಡೆಗೆ

ಮುಪ್ಪಿಗೆ ಮಕ್ಕಳೇ ಊರುಗೋಲೆಂದಾನೆಸಿದಳು

ಮಕ್ಕಳ ಹೆತ್ತ ಹಣ್ಣು ಮುದುಕು....

ಗಂಡಸಾದರೂ ಹಣ್ಣು ಮುದುಕ

ನಡುಗುವ ಕೈ ಅಲುಗುವ ಮೈ

ಇದ್ದುದೆಲ್ಲವ ಮಕ್ಕಳಿಗೆ ಕೊಟ್ಟು

ಬರೆಗೈದು ಮಾಡಿಕೊಂಡು

ತೆಂಗಿನ ತೋಟದಿ ಕೂಲಿಯ ಮಾಡಿದವನ

ನೆನೆವಳು, ಕಣ್ಣೀರ್ಗರೆವಳು

ಮಕ್ಕಳ ಹೆತ್ತ ಹಣ್ಣು ಮುದುಕಿ....

ಪ್ರಶ್ನೆ:-

೧) ಕವಿತೆಯ ಶೀರ್ಷಿಕೆಗೆ ಮತ್ತು ಕವತೆಯ ಸಾರಕ್ಕೆ ಏನು ಸಾಮತ್ಯ ಇದೆ?
೨) ಕವಿತೆಯ ಸಾರಾಂಶವನ್ನು ಬರೆಯಿರಿ.

**ಚಟುವಟಿಕೆ-೨**

**ಕನಸು**

ಕನಸುಗಳು ನಿದ್ರೆಯ ಅವಿಭಾಜ್ಯ ಅಂಗ. ನಿದ್ರೆ ಮಾಡುವ ಪ್ರತಿಯೊಬ್ಬನೂ ಪ್ರತಿದಿನ ಕನಸು ಕಾಣುತ್ತಾನೆ. (ನಿದ್ದೆಯಲ್ಲಿ ನಾಯಿ, ಬೆಕ್ಕುಗಳನ್ನು ಪ್ರಾಣಿಗಳೂ ಕನಸು ಕಾಣುತ್ತವೆ ಎಂದು ನಿರೂಪಿತವಾಗಿದೆ). ಒಂದು ಘಂಟೆ ಕಾಲ ನಿದ್ರೆ ಮಾಡಿದರೆ ಹತ್ತು ಹನ್ನೆರಡು ನಿಮಿಷಗಳ ಕಾಲ ಕನಸುಗಳು ಬೀಳುತ್ತವೆ. ಎಂಬುದು ಮಿದುಳಿನ ವಿದ್ಯುತ್ ಬರವಣಿಗೆಯಿಂದ ದಾಖಲಾಗಿದೆ. ನಿದ್ರೆಯ ಆರ್.ಇ.ಎಂ(Rapied Eye movement) (ಕಣ್ಣಿನ ವೇಗದ ಚಲನೆ ಹಂತದಲ್ಲಿ ಕನಸು ಬೀಳುವುದು ಸಾಬೀತಾಗಿದೆ. ಈ ಹಂತದಲ್ಲಿ ವ್ಯಕ್ತಿಯನ್ನು ಎಬ್ಬಿಸಿದರೆ ಆಗ ಆತ ಕನಸು ಕಾಣುತ್ತಿದ್ದುದ್ದಾಗಿ

ಇಷ್ಟಿಕೊಳ್ಳುವುದಲ್ಲದೆ ಅದರ ಪೂರ್ಣ ವಿವರಗಳನ್ನು ಕೊಡಲು ಶಕ್ತನಾಗುತ್ತಾನೆ. ಅಂದರೆ ಪ್ರತಿ ರಾತ್ರಿ ಐದು ಸಲ ಪ್ರತಿಭಾರಿ ಹತ್ತು ನಿಮಿಷಗಳಂತೆ ಸುಮಾರು ಐವತ್ತು ನಿಮಿಷಗಳ ಕಾಲ ಕಪ್ರತಿ ವ್ಯಕತಿ ಕನಸು ಕಾಣುತ್ತಾನೆ. ಆದರೆ ಬಹುತೇಕ ಕನಸುಗಳು ನೆನಪಿನಲ್ಲಿ ಉಳಿಯುವುದಿಲ್ಲ. ಏಕೆಂದರೆ ಆರ್.ಇ.ಎಂ ನಂತರ ಎನ್. ಆರ್. ಇ. ಎಂ (Non Rem Eye Movement) ನಿದ್ರೆ ಪ್ರಾರಂಭವಾಗಿ ಬಿದ್ದ ಕನಸುಗಳು ಮರೆಯಾಗುತ್ತವೆ. ಬೆಳಗಿನ ಜಾವದ ಕನಸುಗಳು ಉಳಿಯುತ್ತವೆ. ಕಾರಣ ವ್ಯಕ್ತಿಗೆ ಆ ಸಮಯದಲ್ಲಿ ಎಚ್ಚರವಾಗುವುದು. ನಿದ್ರಾ ತೊಂದರೆಗೆ ಈಡಾದ ವ್ಯಕ್ತಿ ರಾತ್ರಿಯಲ್ಲಿ ಹಲವು ಬಾರಿ ಎಚ್ಚರಗೊಳ್ಳುವುದರಿಂದ ಆತನಿಗೆ ಪ್ರತಿ ಆರ.ಇ.ಎಂ ನಿದ್ರೆಯ ಅವಧಿಯ ಕನಸುಗಳು ನೆನಪಿನಲ್ಲಿ ಉಳಿಯುತ್ತವೆ. ಆದ್ದರಿಂದ ಹೀಗೆ ನಿದ್ರಾ ತೊಂದರೆ ಇರುವ ವ್ಯಕ್ತಿ ತನಗೆ ವಿಪರೀತ ಕನಸುಗಳು ಬೀಳುತ್ತವೆ ಅದರಿಂದ ತನ್ನ ನಿದ್ರೆ ಹಾಳಾಗಿದೆ ಎಂದು ದೂರುತ್ತಾನೆ, ಆದರೆ ವಾಸ್ತವಿಕವಾಗಿ ಕನಸುಗಳೇನೂ ಹೆಚ್ಚಾಗಲಿಲ್ಲ, ಅವುಗಳ ನೆನಪುಗಳು ಉಳಿಯುವಂತಾಯಿತು ಅಷ್ಟೆ. (REM-Raped Eye movement–ನಿದ್ರೆ ಬಂದ ೯೦ ನಿಮಿಷಗಳ ಅನಂತರ ಪ್ರಾರಂಭವಾಗುತ್ತದೆ. ಈ ಸಂದರ್ಭದಲ್ಲಿ ಶರೀರ ನಿಶ್ಚಲವಾಗಿದ್ದರೂ ಮಿದುಳು ಮಾತ್ರ ಕಾರ್ಯನಿರ್ವಹಿಸುತ್ತಿರುತ್ತದೆ. ಆನತಂರ ಬರುವ ಹಂತವೇ Non REM–ಇಲ್ಲಿ ಮಿದುಳು ಕೂಡ ನಿಷ್ಕ್ರಿಯವಾಗಿರುತ್ತದೆ.)

(ಈ ಲೇಕನವನ್ನು ಡಾ॥ ಸಿ.ಆರ್. ಚಂದ್ರಶೇಖರ್ ಅವರು ಬರೆದಿರುವ 'ನಿದ್ರೆ ಮತ್ತು ಕನಸುಗಳು'ಎಂಬ ಪುಸ್ತಕದಿಂದ ಆಯ್ದುಕೊಂಡಿದೆ. P.No.೨೩)

ಪ್ರಶ್ನೆಗಳು:

೧) ಶೀರ್ಷಿಕೆ ಮತ್ತು ವಿಷಯ ವಿಸ್ತರಣೆಗೂ ಸಂಬಂಧವನ್ನು ಬರೆಯಿತು.
೨) ಆವರಣದಲ್ಲಿರುವ ವಿಷಯಗಳನ್ನು ಗಮನಿಸಿ ಅರ್ಥೈಸಿಕೊಳ್ಳಿ.

**ಸೂಕ್ಷ್ಮ ವಾಚನ:– (Scanning)**

ಸೂಕ್ಷ್ಮ ವಾಚನದಲ್ಲಿ ಓದುಗನು ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಓದುಗ ಒಂದು ವಿಷಯವನ್ನು ನಿಧಾನವಾಗಿ, ಎಚ್ಚರಿಕೆಯಿಂದ, ಏಕಾಗ್ರ ಚಿತ್ತತೆಯಿಂದ ಓದಬೇಕು, ಕಾರಣ ಓದುತ್ತಿರುವ ವಿಷಯದ ಎಲ್ಲಾ ಅಂಶಗಳನ್ನು ಗ್ರಹಿಸಿ, ಅರ್ಥಮಾಡಿಕೊಳ್ಳಬೇಕಾಗುತ್ತದೆ. ಆಸಕ್ತಿ ಮತ್ತು ತನ್ಮಯತೆಯಿಂದ ಇದು ಸಾಧ್ಯವಾಗುವುದು. ಇದಕ್ಕೆ ಉತ್ತಮ ಉದಾಹರಣೆಯೆಂದರೆ ವಿದ್ಯಾರ್ಥಿಗಳು ಪಾಠಗಳನ್ನು ಓದುವ ರೀತಿ.

**ಚಟುವಟಿಕೆಗಳು:–೧**

ರಾಣಿ ಅಬ್ಬಕ್ಕದೇವಿ ಸೋಮನಾಥ ದೇವಾಲಯದ ಅಂಗಣದಲ್ಲಿ ನಿಂತು ಪಡುವಣ ಕಡಲನ್ನು ನೋಡುತ್ತಿದ್ದಳು. ಇರುಳೆಲ್ಲ ಆರ್ಭಟಸುತ್ತಿದ್ದ ಕಡಲು ನಿದ್ರಿಸುತ್ತಿದ್ದಿತು. ಕಡಲಲ್ಲಿ ತಮ್ಮ ಭಾಗ್ಯವನ್ನು ಅರಸಲು ಹೋದ ಮೊಗವೀರರ ದೋಣಿಗಳು ಪುಟ್ಟ ಬಾತುಕೊಳ್ಳಿಗಳಂತೆ ಕಾಣುತ್ತಿದ್ದವು. ಅಬ್ಬಕ್ಕ

ದೇವಿಯು "ಆ ಹಡಗುಗಳು ಯಾರವು?"ಎಂದು ಕ್ಷಣಕಾಲ ಯೋಚಿಸಿದಳು. ಒಂದಲ್ಲ, ಎರಡಲ್ಲ, ಹದಿನೈದು ಹಡಗುಗಳಿದ್ದವು.

**ಈ ಮೇಲಿನ ಖಂಡಿಕೆಯನ್ನು ಸೂಕ್ಷ್ಮವಾಗಿ ಓದಿ:**

೧) ಮೊಗವೀರರು ಅರಸಲು ಹೋದ ಸಂಪತ್ತು ಸೂಚಿಸುವ ಪದವನ್ನು ಗುರುತಿಸಿ.

೨) ದೋಣಿಗಳನ್ನು ಯಾವುದಕ್ಕೆ ಹೋಲಿಸಿದ್ದಾರೆ?

೩) ದೋಣಿಗಳನ್ನು ಯಾವುದಕ್ಕೆ ಹೋಲಿಸಿದ್ದಾರೆ?

೪) ಈ ಖಂಡಿಕೆಯಲ್ಲಿ ಏನು ನಿದ್ರಿಸುತ್ತಿದ್ದಿತು?

**ಚಟುವಟಿಕೆ–೨**

ಒಂದಾನೊಂದು ಕಾಲದಲ್ಲಿ ಉತ್ತರ ಭಾರತದಲ್ಲಿ ಮೌರ್ಯ ಎಂಬ ಸಾಮ್ರಾಜ್ಯ ಸ್ಥಾಪಿತವಾಗಿತ್ತು. ಈ ಸಾಮ್ರಾಜ್ಯಕ್ಕೆ ಸ್ಥಾಪನೆ ಮುನ್ನ ಚಂದ್ರಗುಪ್ತ ಮೌರ್ಯ ಎಂಬ ರಾಜನು ಗ್ರೀಕರನ್ನು ಮತ್ತು ನಂದರನ್ನು ಸೋಲಿಸಿ ವಿಶಾಲ ಸಾಮ್ರಾಜ್ಯದಲ್ಲಿ ಅಧಿಪತಿಯಾದನು. ಇಪ್ಪತ್ತು ವರ್ಷಗಳ ನಂತರ ಬಿಂದುಸಾರನೆಂಬ ಬೇಜವಾಬ್ದಾರಿ ಮಗ ಹುಟ್ಟಿದನು. ಇವನು ಸಾಮ್ರಾಜ್ಯ ಕಟ್ಟುವ ಬದಲಿಗೆ ಅವನತಿಗೆ ಕಾರಣವಾಗಿದ್ದ ಸಂದರ್ಭದಲ್ಲಿ ಅಶೋಕನೆಂಬ ಪುಣ್ಯಾತ್ಮ ಮಗನು ಜನಿಸಿದನು. ಅವನು ಜನರ ಕಲ್ಯಾಣಕ್ಕಾಗಿ ವಿಶಾಲ ಸ್ಥಾಪಿಸಿ ಕಳಿಂಗವೆಂಬ ದೊಡ್ಡ ಕದನವನ್ನು ನಡೆಸಿ ಗೆದ್ದನು. ಆದರೆ ಅಲ್ಲಿನ ಸಾವು–ನೋವು ರಕ್ತದ ಕೋಡಿಯನ್ನು ನೋಡಿ ಜಿಗುಪ್ಸೆಗೊಂಡು ಮೊದಲು ರಾಜನಾಗಿದ್ದ ಇವನು ನಂತರ ಮಾನವ ಜನಾಂಗಕ್ಕೆಲ್ಲ ಬೌದ್ಧ ಧರ್ಮದ ಮೂಲಕ ದಯೆ, ದಾನ, ಧರ್ಮ, ನೀತಿ, ಮೌಲ್ಯ ಬೆಳೆಸಿದ ಪ್ರಾಮಾಣಿಕ ಅರಸ ಈ ಅಶೋಕ.

ಪ್ರಶ್ನೆಗಳು:

೧) 'ರಾಜ್ಯ'ಪದದ ಸಮನಾರ್ಥಕ ಪದವನ್ನು ಹುಡುಕಿ.

೨) ಮೇಲಿನದರಲ್ಲಿ ಸವರ್ಣದೀರ್ಘ ಸಂಧಿ'ಪದವನ್ನು ಗುರುತಿಸಿ

೩) 'ರಾಜ'ಇದಕ್ಕೆ ಪರ್ಯಾಯ ಪದ ಏನು?

**ವೇಗ ಓದು: (Rapid Reading)**

ವೇಗ ಓದಿನಲಕ್ಷಿ ಓದಬೇಕಾಗಿರುವ ವಿಷಯ ಬಹಳವಾಗಿದ್ದು, ಅತ್ಯಲ್ಪ ಸಮಯದಲ್ಲಿ ಅದಷ್ಟನ್ನೂ ಓದಿ ಅರ್ಥಮಾಡಿಕೊಳ್ಳಬೇಕಾಗಿರುವುದು. ಇದಕ್ಕಾಗಿ ಓದುವುದೆಲ್ಲವನ್ನೂ ಈ ಗುಂಪಿಗೆ ಸೇರಿಸಬಹುದು. ಒಂದು ವಿಷಯದ ಅತ್ಯಂತ ಅಗತ್ಯವಾದ ಅಂಶಗಳಣ್ನು ಮಾತ್ರ ಗ್ರಹಿಸಬೇಕೆಂದಾಗ ನಡೆಸುವ ಒಂದು. ಕೆಲವೊಮ್ಮೆ ಯಾವುದೋ ಒಂದು ವಿಷಯದ ಮಾಹಿತಿಯನ್ನು ಸಂಗ್ರಹಿಸುತ್ತಿರುವಾಗ ಓದುತ್ತಿರುವ ಪುಸ್ತಕದ ಎಲ್ಲಾ ಪದಗಳನ್ನು ವಾಕ್ಯಗಳನ್ನು, ಎಲ್ಲಾ ಪುಟಗಳನ್ನು ಓದುವ, ಅರ್ಥಮಾಡಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. ಆದರೆ ಈ ಓದಿನ ವಿಷಯದ ಮುಖ್ಯ ಅಂಶಗಳನ್ನು ಮಾತ್ರ ಸಂಗ್ರಹಿಸಿದರೆ ಇಡೀ ಪಾಠವನ್ನು, ಲೇಖನವನು, ಪುಸ್ತಕವನ್ನು ಓದಿದ ಅಗತ್ಯ

ಪೂರೈಸಿದಂತಾಗುತ್ತದೆ. ಉದಾಹರಣೆಗೆ ವಿದ್ಯಾರ್ಥಿಗಳು ಪರೀಕ್ಷೆಯ ಮುನ್ನಾ ದಿನ ಅದಕ್ಕೋಸ್ಕರ ಸಿದ್ದತೆಯನ್ನು ಮಾಡಿಕೊಳ್ಳಲು ಯಾವ ಅಧ್ಯಾಯವನ್ನು ಮಾಡಿಕೊಳ್ಳುತ್ತಾರೋ ಅದನ್ನು ಈ ಗುಂಪಿಗೆ ಸೇರಿಸಬಹುದು. ಜೊತೆಗೆ ತರಗತಿಯಲ್ಲಿ ಬಳಸುವ ಪಠ್ಯಪುಸ್ತಕಗಳನ್ನು ಉದ್ದೇಶ ಹಾಗೂ ವೇಗಕ್ಕೆ ಹೊಂದುವಂತೆ ಬಳಸಿಕೊಂಡು ಅಧ್ಯಾಪಕರು ಓದನ್ನು ನಡೆಸಲು ವಿದ್ಯಾರ್ಥಿಗಳಿಗೆ ತಿಳಿಸಬಹುದು.

**ಚಟುವಟಿಕೆ–೧**

ಸಾಮಾನ್ಯವಾಗಿ ಜನ್ನನ ಯಶೋಧರ ಚರಿತೆಯ ಬಗ್ಗೆ ಮಾತನಾಡದ ವಿಮರ್ಶಕರಿಲ್ಲ. ನವೋದಯ, ನವ್ಯ, ಬಂಡಾಯ, ದಲಿತಸಾಹಿತ್ಯ, ಸಂದರ್ಭಗಳಲ್ಲಿ ಈ ಕೃತಿ ಪುನರ್‌ಮೌಲ್ಯೀಕರಣಕ್ಕೆ ಒಳಪಡುತ್ತಲೇ ಬಂದಿವೆ. ಅಮೃತಮತಿಯ ಪ್ರಸಂಗವನ್ನು ಕುರಿತು ಕೆಲವು ಅವಳ ಪಾತ್ರಕ್ಕೆ ಅನ್ಯಾಯವಾಗಿದೆ ಎಂದು ಬಾವಿಸಿದರೆ ಮತ್ತೆ ಕೆಲವು ನಿರ್ದಯೆಯಿಂದ ಅವಳನ್ನು ಕಾಮುಕ ಹೆಣ್ಣು, ಜಾರಸ್ತ್ರೀ ಮುಂತಾಗಿ ಖಂಡಿಸಿ ತೃಪ್ತಿಪಟ್ಟುಕೊಂಡಿದ್ದಾರೆ. ಈ ಕಾವ್ಯದ ಯಶಸ್ಸು ನಿಂತಿರುವುದು **'ಅಮೃತಮತಿಯ ಪ್ರಣಯ ಪ್ರಸಂಗದ'** ಮೇಲೆ ಎಂದು **ತೀನಂ ಶ್ರೀ** ಹೇಳಿದ್ದಾರೆ.

ಮೊದಲಿಗೆ ಯಶೋಧರ ಮತ್ತು ಅಮೃತಮತಿಯರ ದುರಂತ ಪ್ರಣಯಕ್ಕೆ ವಿಧಿಯ ಕೈವಾಡವೇ ಕಾರಣವೆಂದೂ ಅಮೃತಮತಿ ಜಾರುವುದಕ್ಕೆ ವಿಧಿಯ ಕೈವಾಡಕ್ಕೆ ಕಾರಣವೆಂದೂ ಅಮೃತಮತಿ ಜಾರುವುದಕ್ಕೆ ಅವಳ ಸಂಗೀತ ಪ್ರಿಯತೆಯೇ ಕಾರಣವೆಂದೂ ಮನೋವಿಜ್ಞಾನದ ನೆಲೆಯಿಂದ ನೋಡಿದರೆ ಅವಳ ವಿಪರೀತ ಮನೋವಿಕಾರವೇ ಕಾರಣವೆಂದೂ ಅವಳ ಪಾತ್ರವನ್ನು ವಿಶ್ಲೇಷಿಸಿ ಹೇಳಲಾಗಿದೆ. ಇಷ್ಟೆಲ್ಲಾ ಕಾರಣಗಳನ್ನು ಹೇಳಿದ್ದಾಗ್ಯೂ ಕೂಡ ಈ ಕಾವ್ಯ ವಾಸ್ತವ ಮಟ್ಟಕ್ಕಿಂತ ಭಿನ್ನವಾದ ಮಟ್ಟದಲ್ಲಿಯೇ ಕೆಲಸ ಮಾಡುತ್ತದೆ. ಹಾಗಾಗಿ ಬೆಂತರನ ಪ್ರಸಂಗವನ್ನಾಗಲಿ, ಭವಾವಳಿಯ ಕಥೆಯನ್ನಾಗಲಿ, ಮಾರಿದತ್ತನ ಮನಃ ಪರಿವರ್ತನೆಯನ್ನಾಗಲಿ ವಾಸ್ತವದ ಮಟ್ಟದಲ್ಲಿ ಒಪ್ಪಿಕೊಳ್ಳಲಾರೆವು. ಇದನ್ನೆಲ್ಲ ಪ್ರಶ್ನಿಸಿದ ನಮ್ಮ ವಿಮರ್ಶೆ ಅಮೃತಮತಿಯ ಪ್ರಸಂಗದಲ್ಲಿ ಮಾತ್ರ ವಾಸ್ತವ ಚಿತ್ರಣವನ್ನು ಕಾಣಲು ಕಾಣಲು ಏಕೆ ಉತ್ಸಾಹಿಸುವುದೋ ಅರ್ಥವಾಗುವುದಿಲ್ಲ. ಎಂದರೆ ಕಾವ್ಯದ ಶಿಲ್ಪದಲ್ಲಿ ಬೆಂತರದ ಕೂಗಿಗೂ ಭವಾಳಿಯ ಚಿತ್ರಣಕ್ಕೂ ಮಾರಿದೇವತೆಯ ಮನ: ಪರಿವರ್ತನೆಗೂ ನಿರ್ದಿಷ್ಟವಾದ, ಅನಿವಾರ್ಯವಾದ ಉದ್ದೇಶವಿದೆ, ಎಂದ ಮೇಲೆ ಅಮೃತಮತಿಯ ಪ್ರಣಯ ಪ್ರಸಂಗಕ್ಕೂ ಅನಿವಾರ್ಯವಾದ ಉದ್ದೇಶವಿದೆ ಎಂದಾಯಿತು.

**ಅಭ್ಯಾಸಗಳು:–**

೧) 'ಅಷ್ಟವಂಕ'ನ ಬಗ್ಗೆ ಒಂದು ಟಿಪ್ಪಣಿ ಬರೆಯಿತು.

೨) ಐತಿಹಾಸಿದ ಕಾದಂಬರಿಗಳನ್ನು ಪಟ್ಟಿ ಮಾಡಿರಿ.

೩) 'ದಲಿತಸಾಹಿತ್ಯದ'ಬಗ್ಗೆ ಒಂದು ಪುಟ್ಟ ಪ್ರಬಂಧ ಬರೆಯಿರಿ.

(ಪ್ರಬುದ್ಧ ಕರ್ಣಾಟಕ, ೧೯೯೩–೯೪, ಪ್ರ.ಸಂ.೬೯–೭೦)

## ವೇಗ ಓದು (Rapid Reading)

ಅಂಬೇರ ಜಯಪುರದ ಪೂರ್ವಕಾಲದ ರಾಜಧಾನಿಯಾಗಿತ್ತು. ಹಳೆಯ ಕೋಟೆ, ಅರಮನೆಗಳೆಲ್ಲ ಅಲ್ಲಿವೆ. ಸಂಜೆ ಹಾಗೂ ಮುಂಜಾನೆ ಅಲ್ಲಿಗುಡ್ಡ ಬೆಟ್ಟಗಳು, ಕಣಿವೆಗಳು ಅಪೂರ್ವವಾಗಿ ಕಾಣುತ್ತವೆ. ಲೇಖಕರು ಹಿಂದೆ ಅಲ್ಲಿಗೆ ಹೋಗಿದ್ದಾಗ ಜನವಸತಿ ಇರಲಿಲ್ಲ. ಅಲ್ಲಿನ ಹಲವಾರು ಪ್ರಾಚೀನ ಗುಡಿಗೋಪುರಗಳು ಗೂಬೆಯ ಮನೆಗಳಾಗಿದ್ದವು. ಈಗ ಹಾಗಿಲ್ಲ ನೂರಾರು ಸಿಂಧಿ ಕುಟುಂಬಗಳು ಅಲ್ಲಿ ಮನೆ ಮಾಡಿಕೊಂಡು ವಾಸಮಾಡುತ್ತಿದ್ದೇವೆ.

ಜಯಪುರ ಬಣ್ಣಗಾರರ ತವರೂರು ಬಣ್ಣ ಹಾಕುವ ಕುಶಲಿಗರು ಇಲ್ಲಿನ ಹೆಂಗಸರು ರಂಗುರಂಗಿನ ಲಿಂಗ ಪಾಯಿಜಾಮ, ಸೀರೆ, ರವಿಕೆ, ಮೇಲುದೆ ತೊಡುವಾಗ ಅವರಿಗೆ ಕೆಂಪು, ಕಿತ್ತಳೆ, ಹಳದಿ ಎಂದರೆ ಪ್ರಾಣ, ನಿತ್ಯವೂ ಹೋಳಿ ಹುಣ್ಣಿಮೆ ಮಾಡುವವರಂತೆ ಬಣ್ಣದ ಚೆಲ್ಲಾಟವನ್ನು ಅವರ ಬಟ್ಟೆಗಳಲ್ಲಿ ಕಾಣಬಹುದು. ಗಂಡಸರೇನು ಇದಕ್ಕೆ ಹೊರತಾಗಿಲ್ಲ ಅವರ ಪಂಚೆ, ಅಂಗಿಗಳಲ್ಲಿ ರಂಗು ಕಾಣಿಸದಿದ್ದರೂ ಅವರ ಮುಂಡಾಸಿನ ಮೂವತ್ತು ಮೊಳಗಳಲ್ಲಿ ಮುನ್ನೂರು ಬಣ್ಣಗಳ ಕಾಣಿಸಿಗುವುದುಂಟು.

**ಅಭ್ಯಾಸಗಳು.**

**I ಕೆಳಗಿನ ಪ್ರಶ್ನೆಗಳಿಗೆ ಒಂದು ಪದದಲ್ಲಿ ಉತ್ತರ ಹೇಳಿ**

೧) ಜಯಪುರದ ಪೂರ್ವ ಕಾಲದ ರಾಜಧಾನಿ ಯಾವುದು?
೨) ಲೇಖಕರು ಹಿಂದೆ ಅಲ್ಲಿಗೆ ಹೋಗಿದ್ದಾ ಅಲ್ಲಿ ಏನು ಇರಲಿಲ್ಲ?
೩) ಈ ಅಲ್ಲಿ ಯಾವ ಕುಟುಂಬಗಳು ವಾಸ ಮಾಡ್ತಾ ಇವೆ?
೪) ಜಯಪುರ ಯಾರ ತವರೂರು?
೫) ಗಂಡಸರ ಯಾವ ಉಡುಗೆಯಲ್ಲಿ ಬಣ್ಣ ಕಾಣಿಸುವುದು?

**II ಬಿಟ್ಟ ಸ್ಥಳಗಳನ್ನು ತುಂಬಿರಿ**

೧) ಅಲ್ಲಿ------- ಅಪೂರ್ವವಾಗಿ ಕಾಣುತ್ತವೆ.
೨) ನಿತ್ಯವು--------------ಮಾಡುವವಂತೆ ಅವರ ಬಟ್ಟೆಗಳಲ್ಲಿ ಬಣ್ಣದ ---------- ಕಾಣಬಹುದು.
೩) ಅಲ್ಲಿನ ಹಲವಾರು ಪ್ರಾಚೀನ---------ಗೂಬೆಯ ಮನೆಗಳಾಗಿದ್ದವು.

**III ನೀವು ಹೀಗೆ ಸಂದರ್ಶಿಸಿದ ಒಂದು ಸ್ಥಳದ ಮುಖ್ಯಾಂಶಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ತಿಳಿಸಿ.**

೯ನೇ ತರಗತಿ ಪುಸ್ತಕ
ಬೆಡಗಿನ ತಾಣ ಜಯಪುರ
ಪ್ರವಾಸ ಕಥನ

## ವಿಮರ್ಶಾತ್ಮಕ ಓದು: (Critical Reading)

ವಿಮರ್ಶಾತ್ಮಕ ಓದು ಎಂದರೆ ಓದುತ್ತಿರುವ ವಿಷಯ, ವಸ್ತು, ತನ್ನ ಅನುಭವ, ಜ್ಞಾನ, ಅಭ್ಯಾಸ ಹಾಗೂ ಹಿಂದಿನ ಓದಿನ ಆಧಾರದ ಮೇಲೆ ಬೇರೆ ಬೇರೆ ದೃಷ್ಟಿಕೋನಗಳಿಂದ ಬೆಲೆ ಕಟ್ಟುವ ಅಥವ ಮೌಲ್ಯೀಕರಿಸಲು ಓದುವುದಾಗಿದೆ. ಇಲ್ಲಿ ವಿಷಯದ ಸಾಧ್ಯ ಅಸಾಧ್ಯತೆ, ಸರಿ–ತಪ್ಪು, ಗುಣ–ದೋಷ ಇತ್ಯಾದಿಗಳ ಮೌಲ್ಯಮಾಪನ ನಡೆಯುತ್ತಿರುತ್ತದೆ. ಈ ಬಗೆಯ ಓದು ಒಂದು ರೀತಿಯಲ್ಲಿ ಬೇರೊಬ್ಬರು ಬರೆದಿರುವ ಅಭಿಪ್ರಾಯಕ್ಕೆ ತನ್ನ ದೃಷ್ಟಿಯಲ್ಲಿ ಪ್ರತಿಕ್ರಿಯಿಸುವುದಾಗಿದೆ. ಹಾಗಾಗಿ ವಿಮರ್ಶಾತ್ಮಕ ಓದು ಸರಳವಾದ ಓದಲ್ಲ, ಇಲ್ಲಿ ಓದುಗನ ಅನುಭವ, ಪಾಂಡಿತ್ಯ, ಪ್ರತಿಭೆಗಳೇ ಪರೀಕ್ಷೆಗೆ ಒಳಪಡುತ್ತಿರುತ್ತವೆ.

**ಚಟುವಟಿಕೆ–೧**

ಕರ್ನಾಟಕದ ಜನಪದ ಸಂಪ್ರದಾಯಗಳಲೆಲ್ಲ **'ಮೈಲಾರನ'** ಸಂಪ್ರದಾಯ ತುಂಬ ವಿಶಿಷ್ಟವಾದುದು. ಆ ಸಂಪ್ರದಾಯ ಎಷ್ಟು ಸಂಕೀರ್ಣವಾಗಿದೆ ಎಂದರೆ ಅದಕ್ಕೆ ಸಂಬಂಧಿಸಿದ ಎಲ್ಲ ವಿವರಣೆಗಳನ್ನು ಒಂದು ಚೌಕಟ್ಟಿಗೆ ತಂದು ವಿವರಿಸಲು ಸಾಧ್ಯವಿಲ್ಲ. ಮೈಲಾರ ದೇವಳದ ಸುತ್ತ ಇರುವ ಬಗೆ ಬಗೆಯ ಗುಡಿಗಳು, ಅಲ್ಲಿ ನಡೆಯುವ ವಿವಿಧ ಆಚರಣೆಗಳು ಮತ್ತು ನಂಬಿಕೆಗಳನ್ನೆಲ್ಲ ಒಂದು ಕೇಂದ್ರಕ್ಕೆ ತಂದು ಜೋಡಿಸಿ ಮಂಡಿಸುವುದು ಯಾರಿಗಾದರೂ ಒಂದು ಸವಾಲೇ ಸರಿ. ಮೈಲಾರ ಸಂಪ್ರದಾಯದ ಬಗೆಗೆ ನಡೆಸಿದ ಅಧ್ಯಯನಗಳು ತುಂಬ ಮಹತ್ವದ್ದಾಗಿದೆ. ಜಾನಪದ ವಿದ್ವಾಂಸರು ಮೈಲಾರ ಸಂಪ್ರದಾಯದ ಕುರಿತಾಗಿರುವ ಐತಿಹ್ಯ, ಪುರಾಣ ಸಂಕೇತಗಳನ್ನೆಲ್ಲ ತುಂಬ ಶ್ರಮವಹಿಸಿ ಸಂಗ್ರಹಿಸಿಕೊಟ್ಟಿದ್ದಾರೆ. ಮೈಲಾರನಿಗೆ ಸಂಬಂಧಿಸಿದ ಖಂಡ ಕಾವ್ಯಗಳಲ್ಲಿ ಆತ ಕನಿಷ್ಠ ಮೂರು ಜನರನ್ನು ಮೂರು ರೀತಿಯಲ್ಲಿ ಮದುವೆಯಾಗುತ್ತಾನೆ. ಮೈಲಾರ ದೇವರಿಗೆ ಬೇರೆ ಬೇರೆ ಕಾಲದಲ್ಲಿ ಕಟ್ಟಲಾದ ಗುಡಿಗಳಲ್ಲಿ ಆತ ಮೂವರು ಹೆಂಡತಿಯರಿಗೆ ಪ್ರತ್ಯೇಕ ಸ್ಥಾನಗಳನ್ನು ಕಲ್ಪಿಸಲಾಗಿದೆ. ಜೊತೆಗೆ ಈ ಮೂವರಿಗೆ ಬೇರೆ ಬೇರೆ ರೀತಿಯ ಶಿಲ್ಪಗಳನ್ನು ಕೊರೆಯಲಾಗಿದೆ. ಪ್ರತಿವರ್ಷ ನಡೆಯುವ ಮೈಲಾರದ ಕಾರಣೀಕೋತ್ಸವದಲ್ಲಿ ಮೈಲಾರನ ಕುರಿತಾಗಿರುವ ಕಾವ್ಯದ ಕೆಲವು ಭಾಗಗಳನ್ನು ಪುನರಭಿನಯಿಸಿ ತೋರಿಸಲಾಗುತ್ತದೆ. ಈ ಮದುವೆ, ವಾಸ್ತುಶಿಲ್ಪ, ಆಚರಣೆಗಳ ನಡುವೆ ಇರಬಹುದಾದ ಸಂಬಂಧವನ್ನು ಅದರ ಚಾರಿತ್ರಿಕ ಸಂದರ್ಭದಲ್ಲಿರಿಸಿ ವಿವರಿಸಲು, ವ್ಯಾಖ್ಯಾನಿಸಲು ಪ್ರಯತ್ನ ನಡೆದಿದೆ ಎಂದು ಬರಹಗಾರರು ಹೇಳಿದ್ದಾರೆ.

**ಪ್ರಶ್ನೆಗಳು:**

೧) ನಿಮ್ಮೂರಿನ ಗ್ರಾಮದೇವತೆ ಹಬ್ಬದಲ್ಲಿನ ಸಂಪ್ರದಾಯಗಳನ್ನು ಕುರಿತು ಒಂದು ಟಿಪ್ಪಣಿ ಬರೆಯಿರಿ.

೨) ಮೂಕ ಪ್ರಾಣಿಗಳ ಬಲಿಯನ್ನು ಕುರಿತು ಗೆಳೆಯರೊಂದಿಗೆ ಚರ್ಚಿಸಿ.

೩) ನಿಮಗಿಷ್ಟವಾದ ಕತೆಯೊಂದನ್ನು ಓದಿ ಅದನ್ನು ವಿಮರ್ಶಿಸಿ.

(ಪ್ರಬುದ್ಧ ಕರ್ನಾಟಕ, ೧೯೯೩–೯೪, ಪು.ಸಂ. ೧೪೬–೧೪೭)

ಚಟುವಟಿಕೆ-೨

ಸತ್ಯ, ನ್ಯಾಯ, ಧರ್ಮ, ಪ್ರೀತಿ, ನೀತಿ, ನಂಬಿಕೆ ನಿಷ್ಠೆ, ಪ್ರಾಮಾಣಿಕತೆ ಮಾನವೀಯತೆ ಕಾರ್ಯದಕ್ಷತೆ, ಸಮಾನತೆ, ಎಲವೂ ಉತ್ತಮ ಸಮಾಜದ, ದೇಶದ ಅಭಿವೃದ್ಧಿಯ ಅಡಿಗಲ್ಲುಗಳು ಆದರೆ ಇಂದಿನ ಸಮಾಜದಲ್ಲಿ ಮಾನವ್ನ ಸ್ವಾರ್ಥತೆಯಿಂದಾಗಿ ಎಲ್ಲವೂ ಮೌಲ್ಯ ಕಳೆದುಕೊಂಡಂತಾಗಿದೆ ಎಲ್ಲೆಲ್ಲಿಯೂ ಶೋಷಣೆ ತಾಂಡವಾಡುತ್ತಿದೆ. ಇದರ ಮಧ್ಯ ವ್ಯಕ್ತಿಗಳು ಸಿಲುಕಿ ನಲುಗಿ ಹೋಗುತ್ತಿದ್ದಾರೆ. ಬಡವರು ಶ್ರೀಮಂತರಿಂದ ದುರ್ಬಲರು ಪ್ರಬಲದಿಂದ ಹೀಗೆ ಎಲ್ಲ ವರ್ಗದಲ್ಲೂ ಶೋಷಣೆ ನಡೆಯುತ್ತಿದೆ. ಕೆಳಗಿನ ಅಧಿಕಾರಿಗಳಿಗೆ ಮೇಲಾಧಿಕಾರಿಯಿಂದ ಶೋಷಣೆ, ಹೀಗೆ ಭ್ರಷ್ಟರಿಂದ ಪ್ರಾಮಾಣಿಕರಿಗೆ ನೆಲೆಯಿಲ್ಲದಂತಾಗಿದೆ.

೧) ಈ ಮೇಲಿನ ಗದ್ಯಭಾಗವನ್ನು ಓದಿ ಕಿರು ವಿಮರ್ಶೆ ಬರೆಯಿರಿ.

೨) ಯಾರಿಂದ ಯಾರಿಗೆ ಶೋಷಣೆ ನಡೆಯುತ್ತಿದೆ.

೩) ನಿಮ್ಮ ವೈಯುಕ್ತಿಕ ಅಭಿಪ್ರಾಯವೇನು.

೯ನೇ ತರಗತಿ ಪುಸ್ತಕ

ಪ್ರಾಮಾಣಿಕತೆ ಪುಟ-೧

**ಸೃಜನಾತ್ಮಕ ಓದು: (Creative Reading)**

ಸೃಜನಾತ್ಮಕ ಓದು ಕ್ರಿಯಾಶೀಲವಾದ ಓದಾಗಿರುತ್ತದೆ ಇದು ಓದುವವನ ಮನಸ್ಸಿಗೆ ಹೊಸ ಹೊಸ ಆಯಾಮಗಳನ್ನು ಒದಗಿಸಿ ಅವನ ಅನುಭವಗಳನ್ನು, ಭಾಷಾಭಿವ್ಯಕ್ತಿಯನ್ನು ಹೆಚ್ಚಿಸಿ ಸೃಜನಶೀಲ ಮಾತುಕತೆ ಮತ್ತು ಬರೆವಣಿಗೆಗೆ ತುಂಬಾ ಸಹಕಾರಿಯಾಗುತ್ತದೆ. ಇದು ಸಾಮಾನ್ಯವಾಗಿ ಸೃಜನಶೀಳ ಬರೆಹಗಾರರಲ್ಲಿ ಕಾಣುವ ಓದಿನ ಪ್ರಕಾರವಾಗಿದೆ. ಇಲ್ಲಿ ಓದುವವನು ಯಾವ ಬಗೆಯ ಆಶಯ, ಉದ್ದೇಶಗಳನ್ನು ಇಟ್ಟುಕೊಂಡು ಓದುತ್ತಿರುತ್ತಾನೋ ಆ ಉದ್ದೇಶವನ್ನು ಸಾಧಿಸಲಿಕ್ಕೋಸ್ಕರ ತಾನು ಆರಿಸಿಕೊಳ್ಳುವ ಓದುವ ವೇಗವನ್ನು ಆಧಾರವಾಗಿಟ್ಟುಕೊಂಡು ಓದನ್ನು ಜಾಗೃತ, ಸಹಜ, ವೇಗ ಓದು ಎಂದು ಪರಿಣಿತರು ವಿಭಾಗಿಸುವುದುಂಟು.

**ಚಟುವಟಿಕೆ-೧**

ಸಮಸ್ತ ಭೂಮಂಡಲಕ್ಕೆ ಸೂರ್ಯನು ಮೇಟಿ ಇದ್ದಂತೆ, ಸೂರ್ಯನಿಲ್ಲದೆ ಈ ಜಗತ್ತಿನ ಯಾವ ವ್ಯವಹಾರವೂ ನಡೆಯದು. ವಾಯು, ಸೂರ್ಯ ಹಾಗೂ ಚಂದ್ರರು ಪಿತ್ತ, ವಾತ, ಕಫಗಳೆಂಬ ತ್ರಿದೋಷ ರೂಪದಲ್ಲಿ ಪ್ರಭಾವವನ್ನು ಬೀರುತ್ತಾರೆಂಬುದು ಆಯುರ್ವೇದ ವೈದ್ಯಶಾಸ್ತ್ರದಲ್ಲಿ ವಿಧಿತವಾಗಿದೆ.

ಸೂರ್ಯನ ಕಿರಣಗಳು ನಮ್ಮ ಜೀವನ ಮತ್ತು ಆರೋಗ್ಯಕ್ಕೆ ಎಷ್ಟು ಮಹತ್ವ ಎಂಬುದಕ್ಕೆ ರೈತರು ಉದಾಹರಣೆಯಾಗಬಲ್ಲರು ಬೆಳ್ಳಂಬೆಳಗೆ ಹೊಲಕ್ಕೆ ಹೋಗಿ ತುಂಡುಡುಗೆಯಲ್ಲಿ ಬೆವರು ಸುರಿಸುವ ರೈತನ ಶರೀರಕ್ಕೆ ದಿನವೂ ಸೂರ್ಯನ ರಶ್ಮಿ ಹಾಗೂ ಶುದ್ಧವಾದ ವಾಯು ಹೇರಳವಾಗಿ ಲಭಿಸುತ್ತದೆ. ಹಾಗಾಗಿ ಅವರು ಗಟ್ಟಿಮುಟ್ಟಾದ ಆರೋಗ್ಯವಂತ ಶರೀರವನ್ನು ಹೊಂದಿರುತ್ತಾರೆ. ಅದೇ ನಗರದಲ್ಲಿ ಬಿಸಿಲು ಹಾಗೂ ಶುದ್ಧ ಗಾಳಿಯನ್ನು ಸೇವನೆ ಮಾಡಲಾಗದ ಜನರು ಸತ್ವವುಳ್ಳ ಆಹಾರವನ್ನು ತಿಂದರೂ ಅನಾರೋಗ್ಯದಿಂದ ಬಳಲುತ್ತಿರುವ ಸಂಗತಿ ನಮ್ಮೆಲ್ಲರ ಕಣ್ಣೆದುರಿಗೇ ಇದೆ.

ಇದನ್ನರಿತ ನಮ್ಮ ಪೂರ್ವಿಕರು ಆರೋಗ್ಯ ಹಾಗೂ ಧಾರ್ಮಿಕ ಆಚರಣೆ ಎರಡನ್ನೂ ದೃಷ್ಟಿಯಲ್ಲಿಟ್ಟುಕೊಂಡೇ ಸೂರ್ಯನಮಸ್ಕಾರವನ್ನು ಸೂರ್ಯನ ಕಿರಣಗಳು ಸರಿಯಾಗಿ ಬೀಳುವ ಪ್ರದೇಶ ಹಾಗೂ ತುಳಸೀಕಟ್ಟೆಯ ಸಮೀಪವೇ ಹಾಕಬೇಕೆಂದು ವಿಧಿಸಿದ್ದಾರೆ. ತುಳಸೀ ಗಿಡದ ಗಾಳಿಯಿಂದ ಅನೇಕ ಕಾಯಿಲೆಗಳು ದೂರವಾಗುತ್ತವೆ. ಸೂರ್ಯ ಕಿರಣದಲ್ಲಿ ಹಲ್ಲು ಮತ್ತು ಎಲುಬುಗಳ ಬೆಳವಣಿಗೆಗೆ ಅಗತ್ಯವಾದ 'ಡಿ'ವಿಟಮಿನ ಜೀವಸತ್ವವು ಧಾರಾಳವಾಗಿ ದೊರೆಯುತ್ತದೆಂದು ವೈದ್ಯರು ದೃಢಪಡಿಸಿದ್ದಾರೆ.

**I ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

೧) ಸೂರ್ಯನನ್ನೂ ಯಾರಿಗೆ ಹೋಲಿಸಿದ್ದಾರೆ?

೨) ರೈತರು ಆರೋಗ್ಯವಂತರಾಗಿರಲು ಕಾರಣವೇನು?

೩) ಸೂರ್ಯ ನಮಸ್ಕಾರವನ್ನು ಎಲ್ಲಿ ಹಾಕಬೇಕೆಂದು ಹೇಳಿದ್ದಾರೆ.?"

II

**ಸೂಚನೆಯಂತೆ ಉತ್ತರ ಬರೆಯಿರಿ.**

೧) ಕೆಳಗಿನ ಪದಗಳಿಗೆ ಸಮನಾರ್ಥಕ ಪದ ಬರೆಯಿರಿ.

ಗಡಿ, ಮಾತೆ

೨) ಕೆಳಗಿನ ಪದಗಳನ್ನು ಬಿಡಿಸಿ ಸಮಾಸದ ಹೆಸರು ಬರೆಯಿರಿ.

ಸುವರ್ಣಾಕ್ಷರ, ಅರಮನೆ

೩) ಕೆಳಗಿನ ಗಾದೆಯನ್ನು ವಿವರಿಸಿ

ಬೆಕ್ಕಿಗೆ ಚೆಲ್ಲಾಟ, ಇಲಿಗೆ ಪ್ರಾಣಸಂಕಟ

ಅಥವ

ಹಾಸಿಗೆ ಇದ್ದಷ್ಟು ಕಾಲು ಚಾಚು

ಅಥವ

ಕಬ್ಬು ಡೊಂಕಾದರೆ ಸಿಹಿ ಡೊಂಕೆ

ಚಟುವಟಿಕೆ-೨

## ಡೊಳ್ಳುಕುಣಿತ

ಡೊಳ್ಳುಕುಣಿತ ಜನಪದ ಕಲೆಗಳಲ್ಲಿ ವಿಶಿಷ್ಟವಾದುದು. ಇದು ವಾದ್ಯ ಪ್ರಧಾನ ಕಲೆ, ಬೀರೇಶ್ವರ ಸಮುದಾಯಕ್ಕೆ ಸೇರಿದ ಹಾಲುವಂತ ಸಮುದಾಯದ ಕುಣಿತ **'ಡೊಳ್ಳು'** ಚರ್ಮವಾದ್ಯ ಪೊಳ್ಳು ಪಡಗದ ಎರಡು ಬಾಯಿಗಳಿಗೆ ತೊಗಲು ಹೊದಿಸಿದ ಎರಡು ಪರಡೆಗಳನ್ನಿಟ್ಟು ಹಗ್ಗದಿಂದ ಬಿಗಿದಿರುತ್ತಾರೆ. ಇದನ್ನು ಎರಡು ಕೈಗಳಿಂದ ಬಾರಿಸಬಹುದು, ಬಲಗೈಯಲ್ಲಿ ಬಾರಿಸುವ 'ಗುಣಿ' ಇರುತ್ತದೆ. ಗುಣಿಯಿಂದ ಬಾರಿಸುವ ಗತ್ತಿಗೆ ಹೊದಿಕೆಯಾಗುವಂತೆ ಎಡಗೈಯಿಂದ ಛಾಪು ಹಾಕಲಾಗುತ್ತದೆ. ಭರಮ ದೇವರ ಬ್ರಹ್ಮಪಲ್ಲಕ್ಕಿ ಉತ್ಸವ ಕಾಲಕ್ಕೆ ಡೊಳ್ಳು ಬಾರಿಸುತ್ತಾರೆ ಸಾಮನ್ಯವಾಗಿ ಡೊಳ್ಳು ಬಾರಿಸುವವರು ದೇಹದ ಮೇಲು ಭಾಗಕ್ಕೆ ಕರಿಯ ಕಂಬಳಿಯನ್ನು ಸೊಂಟದ ಭಾಗಕ್ಕೆ ಮೊಳಕಾಲು  ಮೇಲೆ ಬರುವಂತೆ ಕಚ್ಚೆ ಪಂಚೆಯನ್ನು ಉಡುತ್ತಾರೆ. ಕೆಲವೊಮ್ಮೆ ಹುಲಿಯ ಚರ್ಮದ ರೀತಿಯ ಉಡುಪನ್ನು ಧರಿಸುತ್ತಾರೆ. ಕುಣಿತದ ಕಾಲಕ್ಕೆ ಉಳಿದ ವಾದ್ಯಗಾರರು ಹಸಿರು ಇಲ್ಲವೆ ಕೆಂಪು ಬಣ್ಣದ ಗಗ್ಗರಿ. ಅಂಗಿ ಟೊಪ್ಪಿಗೆ ತೊಡುತ್ತಾರೆ. ಡೊಳ್ಳು, ತಾಳ ಮತ್ತು ಕೊಳಲು ಇರುತ್ತವೆ. ಸಾಮಾನ್ಯವಾಗಿ ಹಾಡಿನ ವಿಷಯ ದೈವಮಹಿಮೆ ಅಥವಾ ದೈವ ಭಕ್ತರ ಕಥೆಯಾಗಿರುತ್ತದೆ. ಈ ಕಥನ ಕವನಕ್ಕೆ ರಗಳೆಯೇ ತಕ್ಕ ಧಾಟಿ. ಡೊಳ್ಳು ಕುಣಿತದಲ್ಲಿ ಹಲವಾರು ಕಸರತ್ತುಗಳು ಇವೆ ಇದರಲ್ಲಿಯೇ ಕುದುರೆ ಕುಣಿತ, ಕೋಲು ಕುಣಿತ, ಸಾರು ಕುಣಿತ, ಹುಚ್ಚೆಳ್ಳು ಬಡಿತ, ಕೈಬಾರಿಕೆ, ಒಂದ್ಹೆಜ್ಜೆ, ಎರಡ್ಹೆಜ್ಜೆ ಕುಣಿತವು ಸೇರಿದಂತೆ ವೈವಿಧ್ಯಮಯ ಕುಣಿತಗಳಿವೆ. ಈ ಅದ್ಭುತ ಪ್ರದರ್ಶನ ಕಲೆ ಇಂದು ಧಾರ್ಮಿಕತೆಯ ಆವರಣದಿಂದ ಹೊರಬಂದು ಲೌಕಿಕ ಉತ್ಸವದ ಕುಣಿತವಾಗಿದೆ.

ಅಭ್ಯಾಸಗಳು:

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

೧) ಡೊಳ್ಳು ಕುಣಿತ ಎಂತಹ ಕಲೆ, ಇದರಲ್ಲಿ ಯಾವುದು ಪ್ರಧಾನ?
೨) ಡೊಳ್ಳು ತಯಾರಿಕೆಯನ್ನು ವಿವರಿಸಿ
೩) ವೇಷ ಭೂಷಣಗಳ ಬಗ್ಗೆ ಬರೆಯಿರಿ
೪) ಇದೇ ರೀತಿಯ ಇನ್ನೊಂದು ಕಲೆಯನ್ನು ಪರಿಚಯಿಸಿ

**ಬಿಟ್ಟ ಸ್ಥಳಗಳನ್ನು ತುಂಬಿರಿ**

**ಆವರಣದಲ್ಲಿ ಕೊಟ್ಟ ರೂಪವನ್ನು ನೋಡಿ ಬಿಟ್ಟ ಸ್ಥಳಗಳನ್ನು ಸರಿಯಾದ ರೀತಿಯಲ್ಲಿ ತುಂಬಿರಿ.**

೧) ಹಾಲು ಮತ (ಸಮುದಾಯ) --------ಕುಣಿತ

೨) ಉತ್ಸವ (ಕಾಲ) ------ಡೊಳ್ಳು ಬಾರಿಸುತ್ತಾರೆ.

೩) ಸಾಮಾನ್ಯವಾಗಿ (ಹಾಡು) -------ವಿಷಯ ದೈವ ಮಹಿಮೆ

ಈ ಮೇಲಿನ ಓದುವಿಕೆಯ ವಿಧಾನಗಳಿಂದ ಓದುವ ಕಲೆಯನ್ನು ಬೆಳಸುವುದರಿಂದ ಕೆಲವು ಉದ್ದೇಶಗಳು ಸಾಧಿತವಾಗುತ್ತವೆ.

- ಸ್ಪಷ್ಟ ಬರಿಳಿತಗಳನ್ನು ನಿರರ್ಗಳವಾಗಿ ಓದುವ ಸಾಮರ್ಥ್ಯ ಬೆಳಸುವುದು.
- ಧ್ವನಿ ಏರಿಳಿತಗಳನ್ನು ಅಳವಡಿಸಿ ಅರ್ಥಾಭಿವ್ಯಕ್ತಿಯಿಂದ ಓದುವ ಕೌಶಲ ಬೆಳೆಸುವುದು.
- ಕತೆ, ಕವನ, ನಾಟಕ ರೂಪದ ಪಾಠಗಳನ್ನು ಸೂಕ್ತವಾದ ಓದುವ ಮತ್ತು ಆನಂದಿಸುವ ಶಕ್ತಿಯನ್ನು ಬೆಳೆಸುವುದು.
- ಏಕಾಗ್ರತೆಯಿಂದ ಓದುವ ಸಾಮರ್ಥ್ಯ ಬೆಳೆಸುವುದು.
- ಮೌನ ಓದನ್ನು ವೇಗವಾಗಿ ಕೈಗೊಂಡು ವಿಷಯ ಗ್ರಹಿಸುವ ಸಾಮರ್ಥ್ಯ ಬೆಳೆಸುವುದು.
- ದಿನಪತ್ರಿಕೆ, ಜಾಹಿರಾತುಗಳನ್ನು ಸ್ವತಂತ್ರವಾಗಿ ಓದಿ ಗ್ರಹಿಸುವ ಶಕ್ತಿ ಬೆಳೆಸುವುದು.
- ಓದುತ್ತಾ ಮನನ ಮಾಡುತ್ತಾ ಟಿಪ್ಪಣಿ ಮಾಡಿಕೊಳ್ಳುವ ಸಾಮರ್ಥ್ಯ ಬೆಳಸುವುದು.
- ಪರಿಣಿತ ಓದುಗವಾಗಲು ಉತ್ತಮ ಶಬ್ಧ ಭಂಡಾರ ಹೊಂದುವಂತೆ ಮಾಡುವುದು.
- ಸ್ಥೂಲ, ಸೂಕ್ಷ್ಮ ಮತ್ತು ವಿಮರ್ಶಾತ್ಮಕ ವಾಚನ ಕೌಶಲಗಳನ್ನು ರೂಢಿಸಿಕೊಳ್ಳುವಂತೆ ಮಾಡುವುದು.

ಈ ಮೇಲಿನ ಅಂಶಗಳನ್ನು ಶಿಕ್ಷಕನು ಅರಿತುಕೊಂಡು ಪ್ರಾಯೋಗಿಕ ನೆಲೆಯಲ್ಲಿ ಪೂರ್ವಸಿದ್ಧತಾ ಚಟುವಟಿಕೆಗಳಾದಿಯಾಗಿ ಕಲಿಕಾಂಶ ಚಟುವಟಿಕೆಯ ಕೌಶಲಕ್ಕೆ ಸಂಬಂಧಿಸಿದಂತೆ ಗದ್ಯ ಅಥವ ಪದ್ಯವನ್ನು ಸಂಕ್ಷಿಪ್ತವಾಗಿ ವಿವರಿಸಿದರೆ ಓದುವಿಕೆಯ ಕೌಶಲ ತನ್ನ ಸ್ಥಾನವನ್ನು ಗಟ್ಟಿಗೊಳಿಸಿಕೊಳ್ಳುತ್ತದೆ.

I ಕೆಳಕಂಡ ಪದಗಳನ್ನು ಬಿಡಿಸಿ ಬರೆಯಿರಿ

೧) ಕನ್ನಡಿಗರೆಲ್ಲ
೨) ಜೀವದುಸಿರು
೩) ಬೆಳಕಾಗುವಳು
೪) ಸತ್ಯವಾಗಿ
೫) ಭಾವನೆಯಿಂದಲೇ

II ಈ ಕೆಳಕಂಡ ಪದಗಳಲ್ಲಿನ ಅಕ್ಷರಗಳನ್ನು ಬಿಡಿಸಿ ಬರೆಯಿರಿ

೧) ರಾಷ್ಟ್ರೀಯತೆ
೨) ಸಂಸ್ಕೃತಿ
೩) ತಪಸ್ವಿನಿ
೪) ಸ್ವಾತಂತ್ರ್ಯ
೫) ಚಕ್ರವರ್ತಿ

III ಕೆಳಗೆ ಕೊಟ್ಟಿರುವ ಪದಗಳನ್ನು ಸರಿಪಡಿಸಿ ಬರೆಯಿರಿ

೧) ಒಮತದಿಂದ
೨) ಜೀವನಾದಿ
೩) ಕುರುಕ್ಷೇತ್ರ
೪) ಬೆಲಕಾಗುವಳು
೫) ದೃಶ್ಯ

# ಅಧ್ಯಾಯ-೧

## ರಾಷ್ಟ್ರೀಯತೆ

ಕರ್ನಾಟಕದ ಸಂಸ್ಕೃತಿಯ ಜೀವನಾಡಿ ರಾಷ್ಟ್ರೀಯತೆ ಕನ್ನಡಿಗರೆಲ್ಲ ಒಮ್ಮತದಿಂದ ಹಿಡಿದಿರುವ ವ್ರತ ರಾಷ್ಟ್ರೀಯತೆ ಕನ್ನಡ ನಾಡು ಭಾರತ ಜನನಿಯ ತನುಜಾತ ಎಂಬ ಭಾವನೆಯಿಂದಲೇ ಬಾಳುವವರು ಕನ್ನಡ ಕವಿಗಳೆಲ್ಲರ ಜೀವದುಸಿರು ರಾಷ್ಟ್ರೀಯತೆ ಕುವೆಂಪು ಮತ್ತು ಬೇಂದ್ರೆ ಅವರು ತಮ್ಮ ಕವನಗಳಲ್ಲಿ ರಾಷ್ಟ್ರ ಸ್ವಾತಂತ್ರ್ಯದ ಹಂಬಲವನ್ನು ದಟ್ಟವಾಗಿ ಬಿಂಬಿಸಿದರು. ಸ್ವತಂತ್ರ ಭಾರತ ಮತ್ತು ಅದರ ಸಾಧ್ಯತೆಗಳನ್ನು ಕುರಿತು ಕುವೆಂಪು ಅವರು ತಮ್ಮ ಸ್ಮಶಾನ ಕುರುಕ್ಷೇತ್ರವೆಂಬ ನಾಟಕದಲ್ಲಿ ಕೊನೆಯ ದೃಷ್ಯದಲ್ಲಿ ಅತ್ಯಂತ ಆಶಾವಾದದ ಪರಿಣಾಮಗಳನ್ನು ಚಿತ್ರಿಸಿದ್ದಾರೆ. ಭಾರತ ತಪಸ್ವಿನಿ ಎಂಬ ಕವನದಲ್ಲೂ ಈ ರಾಷ್ಟ್ರೀಯತೆಯ ಚಿತ್ರ ಮಿನಗುತ್ತಿದೆ.

"ಭಾರತಾಂಬೆಯೆ ಜಗದ ಬೆಳಕಾಗುವಳು ಮೆರೆವಳು ತಪಸ್ವಿನಿಯ ಚಕ್ರವರ್ತಿನಿಯವಾಗಿ ಎಂಬ ಭವಿಷ್ಯವಾಣಿ ಸತ್ಯವಾಗಿ ಪರಿಣಾಮಿಸಿದೆ.

ರಾಜಕೀಯವಾಗಿ ಈ ನುಡಿ ಈಗ ಹೆಚ್ಚು ಸಾಧ್ಯತೆಯನ್ನು ಪಡೆದಿದೆ. ಒಟ್ಟಾರೆಯಾಗಿ ವಿಶ್ವದ ದೃಷ್ಟಿ ಭಾರತದ ಕಡೆಗೆ ತಿರುಗಿದೆ.

**ಅಭ್ಯಾಸಗಳು:**

## ಅಧ್ಯಾಯ-೨

## ಲೇಖನ ಚಿಹ್ನೆಗಳು

ಕನ್ನಡದಲ್ಲಿ ಲೇಖನ ಚಿಹ್ನೆಗಳು ರೂಢಿಗೆ ಬಂದದ್ದು ಇಂಗ್ಲಿಷ್ ಸಾಹಿತ್ಯದ ಮೂಲಕ ಅದಕ್ಕೆ ಮೊದಲು ಕನ್ನಡ ಭಾಷೆಯಲ್ಲಿ ಇವುಗಳ ಬಳಕೆ ಇರಲಿಲ್ಲ. ಮಾತನಾಡುವಾಗ ಧ್ವನಿಯ ಏರಿಳಿತ, ಸ್ವರಭಾರ, ನಿಲುಗಡೆ, ಸೂಕ್ತವೇಗ ಇವುಗಳನ್ನು ಗಮದಲ್ಲಿಟ್ಟುಕೊಂಡು ಭಾವಪೂರ್ಣವಾಗಿ ಉಚ್ಚರಿಸಿದಾಗ ಕೇಳುವರಿಗೆ ಸ್ಪಷ್ಟವಾಗಿ ಅರ್ಥವಾಗುತ್ತದೆ ಮತ್ತು ಪರಿಣಾಮಿಸುತ್ತಿದೆ. ಹಾಗೆಯೇ ಬರಣಿಗೆಯಲ್ಲಿಯೂ ಲೇಖನ ಚಿಹ್ನೆಗಳ ಪಾತ್ರ ಮುಖ್ಯವಾದದ್ದು. ಲೇಖನ ಚಿಹ್ನೆಗಳಿಲ್ಲದ ಬರವಣಿಗೆ ಸ್ಪಷ್ಟವಾಗಿ ಅರ್ಥವನ್ನು ನೀಡದೆ ತೊಡಕುಗಳಿಗೆ ದಾರಿ ಮಾಡುವುದು ಹಾಗಾಗಿ ಲೇಖನ ಚಿಹ್ನೆಗಳು ಅತ್ಯಂತ ಅಗತ್ಯ. ಕನ್ನಡ ಭಾಷೆಯಲ್ಲಿ ಬಳಕೆಯಲ್ಲಿರುವ ಕೆಲವು ಲೇಖನ ಚಿಹ್ನೆಗಳನ್ನು ಇಲ್ಲಿ ಪರಿಚಯಿಸಲಾಗಿದೆ.

೧) **ಪೂರ್ಣ ವಿರಾಮ: (.)** ಸಂಪೂರ್ಣವಾದ ಅರ್ಥ ಕೊಡುವ ವಾಕ್ಯದ ಕೊನೆಯಲ್ಲಿ ಈ ಚಿಹ್ನೆಯನ್ನು ಬಳಸುವುದು. ಇದು ವಾಕ್ಯ ಕೊನೆಗೊಂಡಿದೆ ಎಂದು ತಿಳಿಸುತ್ತದೆ. ಇಂಗ್ಲಿಷ್‌ನಲ್ಲಿ ಇದನ್ನು ಬಳಸಿದಾಗ ಅಂದರೆ ಪೂರ್ಣವಿರಾಮ ನೀಡಿದಾಗ ಮುಂದಿನ ಅಕ್ಷರ ಕಾಪ್ಟಿಲ್ ಆಗುತ್ತೆ ಆದರೆ ಕನ್ನಡದಲ್ಲಿ ಬೇರೆ ಇಲ್ಲ.

ಉದಾ: ಅವನು ಕನ್ನಡ ವಿದ್ಯಾರ್ಥಿ

ನಾನು ಊರಿಗೆ ಹೋಗಿ, ನಾಳೆ ಬರುತ್ತೇನೆ.

(a) ಪದಗಳ ಸಂಕ್ಷೇಪ ರೂಪ ಬರೆಯುವಾಗ, ಒಂದು ಅಕ್ಷರದ ನಂತರದಲ್ಲಿ ಪೂರ್ಣವಿರಾಮ ಬಳುಸುವುದು ರೂಡಿಯಲ್ಲಿದೆ.

ಉದಾ: ಶ್ರೀ. ಎಂ.ಕೆ. ಗಾಂಧಿ

೨) **ಅರ್ಧವಿರಾಮ: (;)** ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದ ಕ್ಷಣ ಈ ಚಿಹ್ನೆಯನ್ನು ಬಳಸಲಾಗುತ್ತದೆ.

ಉದಾ: ಮಗುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆ ; ನನ್ನ ಹಿಂದೆ ನನ್ನ ತಮ್ಮ ಬಂದ ; ಅವನ ಹಿಂದೆ ನನ್ನ ತಂಗಿಯೂ ಬಂದಳು.

ಒಂದೇ ವಾಕ್ಯದ ಭಾವವಾಗಿ ಅನೇಕ ಉಪವಾಕ್ಯಗಳ ಬರುವುದುಂಟು ಅವು ಎಲ್ಲವೂ ಪ್ರಧಾನ ವಾಕ್ಯಕ್ಕೆ ಉಪವಾಕ್ಯಗಳಾಗಿರುತ್ತವೆ.

೩) **ಅಲ್ಪವಿರಾಮ: (,)** ಸಂಭೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬರುವಾಗ ಕೊನೆಯ ವಿಶೇಷಣ ಬಿಟ್ಟು ಉಳಿದವುಗಳ ಮುಂದೆ ಅಲ್ಪ ವಿರಾಮ ಬಳಸಬೇಕು.

ಉದಾ: ಲಕ್ಷ್ಮಿ, ಬೇಗ ಬಾ

ಬಾಳೆ, ತೆಂಗು, ಪರಂಗಿ ಮತ್ತು ಮಾವು ಇವರ ತೋಟದಲ್ಲಿವೆ.

a) ಸಾಪೇಕ್ಷ ಕ್ರಿಯಾಪದಗಳ ಮುಂದೆಯೂ ಅಲ್ಪ ವಿರಾಮದ ಬಳಕೆವುಂಟು

ಉದಾ: ಮಳೆ ಸರಿಯಾಗಿ ಆಗಿದ್ದರೆ, ಉತ್ತು, ಬಿತ್ತು ಒಳ್ಳೆಯ ಫಸಲು ಬಡೆಯಬಹುದಿತ್ತು.

೪) **ಪ್ರಶ್ನಾರ್ಥಕ ಚಿಹ್ನೆ:** (?) ಪ್ರಶ್ನಾರ್ಥ ರೂಪದ ಪದ ಮತ್ತು ವಾಕ್ಯಗಳ ಮುಂದೆ ಪ್ರಶ್ನಾರ್ಥಕ ಚಿಹ್ನೆಯನ್ನು ಬಳಸಲಾಗುವುದು.

ಉದಾ: ಯಾರು, ಏನು, ಏಕೆ,

ಅವನು ಕನ್ನಡ ವಿದ್ಯಾರ್ಥಿನಾ?

ನಾನು ಒಳಗೆ ಬರಲಾ?

೫) **ಭಾವಸೂಚಕ ಚಿಹ್ನೆ:** (!) ಸಂತೋಷ, ದುಃಖ, ಕೋಪ, ವಿಷಾದ, ಹರ್ಷ, ಆಶ್ಚರ್ಯ ಮೊದಲಾದ ಮನಸ್ಸಿನ ಭಾವನೆಗಳನ್ನು ಸೂಚಿಸುವ ಪದಗಳ ನಂತರ ಭಾವಸೂಚಕ ಚಿಹ್ನೆಯನ್ನು ಬಳಸಲಾಗುವುದು.

ಉದಾ: ಅಯ್ಯೋ ! ಎಷ್ಟು ಸುಂದರ !

ಛೇ ! ಎಂಥ ಕೆಲಸ ಮಾಡಿದೆ !

ಆಹಾ ! ಎಷ್ಟು ಚೆನ್ನ !

೬) **ಉದ್ಧರಣ ಚಿಹ್ನೆ** ( "  ") ಹಾಗೂ ('  ')

ವಾಕ್ಯಗಳನ್ನು ನೇರವಾಗಿ ಉದ್ಧರಿಸಿ ಬರೆಯುವಾಗ ಪದ ಎಂದು ತೋರಿಸುವಾಗ ಹಾಗೂ ವಾಕ್ಯದಲ್ಲಿ ವಿಶೇಷವಾದ ಪದ ಎಂದು ತೋರಿಸುವಾಗ ('  ') ಈ ಚಿಹ್ನೆಯ ಬಳಕೆಯಾಗುತ್ತದೆ. ವಿಶೇಷವಾದ ಪದ ಬೇರೆ ಭಾಷೆಯ ಪದವಾಗಿರಬಹುದು ಇಲ್ಲವೆ ಪಾರಿಭಾಷಿಕ ಶಬ್ಧವಾಗಿರಬಹುದು.

ಉದಾ: "ಎಲ್ಲಾದರೂ ಇರು ಎಂತಾದರು ಇರು, ಎಂದೆದಿಗೂ ನೀ ಕನ್ನಡವಾಗಿರು"

"ಭಾಷೆ ನಶಿಸಿದರೆ ಸಂಸ್ಕೃತಿ ನಾಶವಾದಂತೆ"

ಕನ್ನಡ ಭಾಷೆಯಲ್ಲಿ 'ಇಂಗ್ಲಿಷ್'ಪದಗಳ ಬಳಕೆ ಸಾಮಾನ್ಯವಾಗಿದೆ.

೭) **ಆವರಣ ಚಿಹ್ನೆ:** (  )

ಸಮಾನಾರ್ಥಕ ಶಬ್ದಗ:ಮ್ಮಿ ವಾಕ್ಯಗಳನ್ನು ಬರೆಯುವಾಗ ಈ ಚಿಹ್ನೆಯನ್ನು ಬಳಸುವುದುಂಟು

ಉದಾ: ಜನ ಆರಕ್ಷರ ಠಾಣೆ ( ಪೋಲಿಸ್ ಸ್ಟೇಷನ್) ಗೆ ದೂರು ನೀಡಿದರು.

೮) **ವಿವರಣಾತ್ಮಕ ಚಿಹ್ನೆ** (: )

ವಿಷಯದ ಅಥವಾ ಅಭಿಪ್ರಾಯದ ವಿವರಣೆ ನೀಡುವ ಮೊದಲು ಈ ಚಿಹ್ನೆ ಬಳುಸುವು, ಮುಂದೆ ವಿವರಣೆ ಮಾಡಿದೆ ಎಂಬರ್ಥದಲ್ಲಿ ಈ ಚಿಹ್ನೆಯ ಬಳಕೆಯಿದೆ

ಉದಾ: ನಮ್ಮ ಜ್ಞಾನಪೀಠ ಪುರಸ್ಕೃತರು: ಕುವೆಂಪು, ದ.ರಾ. ಬೇಂದ್ರೆ, ಶಿವರಾಮ ಕಾರಂತ, ಮಾಸ್ತಿ, ವಿ.ಕೃ. ಗೋಕಾಕ ಕನ್ನಡದ ವಿಭಕ್ತಿ ಪ್ರತ್ಯಯಗಳು: ಪ್ರಥಮ, ದ್ವಿತಿಯ ತೃತಿಯ.

೯) **ಅಧಿಕ ಚಿಹ್ನೆ: (x)**

ಪದಗಳನ್ನು ಕೂಡಿಸಿ ಹೇಳುವಾಗ, ಪ್ರತ್ಯಯಗಳ ಜೊತೆ ಸೇರಿಸುವಾಗ ಈ ಚಿಹ್ನೆಯ ಬಳಕೆ ಉಂಟು

ಉದಾ: ಮಗು+ ಅ = ಮಗುವಿನ

ನನ್ನ + ಅದು = ನನ್ನದು

೧೦) **ಸಮಾನಾರ್ಥ ಚಿಹ್ನೆ: (=)**

ಅರ್ಥದಲ್ಲಿ ಸಮಾನ ಎಂದು ತಿಳಿಸುವಾಗ ಈ ಚಿಹ್ನೆ ಬಳಕೆಯಾಗುತ್ತದೆ

ಉದಾ: ಸೂರ್ಯ = ನೇಸರು

ಅರಣ್ಯ = ಕಾಡು

**ಅಭ್ಯಾಸಗಳು:**

I ಈ ಕೆಳಗಿನ ವಾಕ್ಯಗಳನ್ನು ವಿರಾಮ, ಧ್ವನಿಯ ಏರಿಳಿತ, ಸ್ವರ ಭಾರ, ನಿಲುಗಡೆ, ಸೂಕ್ತವೇಗ ಇವುಗಳೊಂದಿಗೆ ಓದಿ

೧) ಕತ್ತಲೆಯಲ್ಲಿ ಅಜ್ಜ ಹೋಗುತ್ತಿದ್ದರು ಅವರು ಕಾಲು ಜಾರಿ ಬಿದ್ದರು ಅಯ್ಯೋ ನಾನು ಬಿದ್ದೆ ಎದ್ದೇಳಿಸಿ ಎಂದು ಕೂಗಿಕೊಂಡರು.

೨) ಶಕ್ತನಾದರೆ ನೆಂಟರೆಲ್ಲ ಹಿತರು ಅಶಕ್ತರಾದರೆ ಆಪ್ತ ಜನರೆ ವೈರಿಗಳು ಎಂದು ಪುರಂದರ ದಾಸರು ಅಂದು ಹೇಳಿದ ಮಾತು ಎಷ್ಟು ಸತ್ಯ

೩) ಭೀಷ್ಮ ದ್ರೋಣ ದುರ್ಯೋಧನ ಕರ್ಣ ಅಶ್ವತ್ಥಾಮ ಇವರೆಲ್ಲ ನನ್ನ ಪರಾಕ್ರಮದ ಮುಂದೆ ಯಾವ ಲೆಕ್ಕ ಎಂದು ಭೀಮ ಅಟ್ಟಹಾಸದಿಂದ ಘರ್ಜಿಸಿದನು.

II ಭಾವಸೂಚಕ ಚಿಹ್ನೆ, ಅರ್ಧವಿರಾಮ ಚಿಹ್ನೆ, ಅಲ್ಪವಿರಾಮ ಚಿಹ್ನೆ, ಪ್ರಶ್ನಾರ್ಥಕ ಚಿಹ್ನೆ ಮತ್ತು ಪೂರ್ಣ ವಿರಾಮ ಚಿಹ್ನೆಗಳನ್ನು ಬಳಸಿ ಒಂದೊಂದು ವಾಕ್ಯ ಉಚ್ಚರಿಸಿ ನಂತರ ಬರೆಯಿರಿ.

III ಈ ಕೆಳಗೆ ಕೊಟ್ಟಿರುವ ಭಾಗವನ್ನು ಓದಿ ಅವಶ್ಯವಿರುವಲ್ಲಿ ಲೇಖನ ಚಿಹ್ನೆಗಳನ್ನು ಬಳಸಿ.

ರಸ್ತೆಗೆ ದೂರದಲ್ಲಿದ್ದ ಗುಹೆಯೊಂದರಲ್ಲಿ ಹುಲಿಯೊಂದು ಮಲಗಿತ್ತು. ದಿನವೆಲ್ಲಾ ಮಲಗಿ ಆಗತಾನೆ ಎದ್ದ ಹುಲಿಗೆ ತನ್ನ ಹೊಟ್ಟೆ ಬರಿದಾಗಿದೆ ಎಂದು ಭಾಸವಾಯಿತು. ಏನು ಮಾಡಲಿ ಎಂದು ಯೋಚಿಸಿತು ಒಂದೆರಡು ಸಾರಿ ಮೈ ಮುರಿಯಿತು ಆಕಳಿಸಿ ಬಂಡೆಗಳ ಮರೆಯಲ್ಲಿ ನಡೆಯುತ್ತಿದ್ದಾಗ ಇದ್ದಕ್ಕಿದ್ದ ಹಾಗೆಯೇ ಮಧುರವಾದ ಗಂಧ ಸುವಾಸನೆ ಅದನ್ನು ಆಕ್ರಮಿಸಿತು ವಾಸನೆಯ ಜಾಡನ್ನೇ ಹಿಡಿದು ರಸ್ತೆ ಬಳಿಗೆ ಬಂದು ಶಾನುಭೋಗರನ್ನು ಕಂಡಿತು ಅವರ ದುಂಡು ದುಂಡಾದ ಶರೀರ ಕಂಡು ಹುಲಿಗೆ ಪರಮಾನಂದವಾಯಿತು ಹುಲಿಯ ಅಭಿಮುಖರಾಗಿರದೆ ಅದರ ಕಡೆಗೆ ಬೆನ್ನು ತಿರುಗಿತು ನಡೆಯುತ್ತಿದ್ದರು ಯಾರನ್ನೇ ಆಗಲಿ ಭರತ ಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ ಶತ್ರುವನಾದರೂ ಸರಿಯೇ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲವಷ್ಟೇ

ಇದಕ್ಕೆ ಪರಿಹಾರ ಹುಲಿ ಶಾನುಭೋಗರಿಗೆ ಅಭಿಮುಖವಾಗಿ ಬರಬೇಕೆ ಬಿಟ್ಟರೆ ಬೇರೆ ದಾರಿ ಇರಲಿಲ್ಲ. ಹುಲಿ ತನ್ನ ಬಡವ ಬಂಧುವಾದ ಬೆಕ್ಕಿನಂತೆ ದೇಹವನ್ನು ಹುದುಗಿಸಿಕೊಂಡು ಮೆಲ್ಲ ಮೆಲ್ಲನೆ ಶಾನುಭೋಗರ ಹತ್ತಿರ ಸರಿಯಿತು, ಇತ್ತ ಶಾನುಭೋಘರಿಗೆ ಮನಸ್ಸಿನಲ್ಲಿ ಅಳುಕು ಹುಟ್ಟಿತು ಕೆಲವರು ಅಪಾಯ ಸೂಚಿಸುವ ಆರನೆಯ ಇಂದ್ರಿಯವೊಂದಿದೆ ಎಂದು ಬಲ್ಲವರು ಹೇಳುತ್ತಾರೆ. ಹಾಗೆಯೇ ಏನೋ ಶಾನುಭೋಗರಿಗೆ ಆ ಇಂದ್ರಿಯ ಜಾಗೃತಗೊಂಡು ಹುಲಿ ಬಂದದ್ದನ್ನು ತಿಳಿಸಿತು. ಅವರು ಕೂಡ ಹುಲಿಯಂತೆಯೆ ಯೋಚಿಸಿ ನಡೆದರು ಸ್ವಲ್ಪ ದೂರ ಹೋದ ಮೇಲೆ ಹುಲಿ ಅವರ ಮೇಲೆ ಮುಂದಿನಿಂದ ಏಗರಿತು ಆಗ ಶಾನುಭೋಗರು ಸ್ವಲ್ಪ ಬಾಗಿದರು ಹುಲಿ ನೆಲಕ್ಕೆ ಇಳಿಯಿತು ತಮ್ಮ ಕಡೆಗೆ ತಿರುಗುವುದರೊಳಗೆ ಅವರು ಹಿಂದಿರುಗಿ ಬಂದ ದಾರಿಯಲ್ಲೆ ಪುನಃ ನಡೆದರು ಹುಲಿ ಕತ್ತೆತ್ತಿ ನೋಡಿತು ಮತ್ತೆ ನನ್ನ ಕಡೆಗೆ ಬೆನ್ನು ತಿರುಗಿಸಿದ್ದಾರೆ ಹುಲಿಯ ಮುಖ ಪೆಚ್ಚಾಯಿತು ಆದರೆ ಮೆಚ್ಚಿಕೆಯು ಆಯಿತು ತಿಂದರೆ ಇಂಥವರನ್ನು ತಿನ್ನಬೇಕು ಎಂದು ಮರಳಿ ಯತ್ನವ ಮಾಡಿತು.

**ಅಭ್ಯಾಸಗಳು:**

ಅವಶ್ಯವಿರುವಲ್ಲಿ ಲೇಖನ ಚಿಹ್ನೆಗಳನ್ನು ಹಾಕಿ ಇದನ್ನು ಮತ್ತೊಮ್ಮೆ ಬರೆಯಿರಿ.

**ನುಡಿಗಟ್ಟು:**

ವಿಶೇಷ ಅರ್ಥವನ್ನು ಕೊಡುವ ಅರ್ಥವ್ಯಾಪ್ತಿಯನ್ನು ವಿಸ್ತರಿಸುವ ವಿಶೇಷ ರೀತಿಯ ಪದ ಪದಪುಂಜವನ್ನು ನುಡಿಗಟ್ಟು ಎಂದು ಕರೆಯುತ್ತೇವೆ. ನುಡಿಗಟ್ಟು ಬಳಕೆಗೊಂಡ ಸಂದರ್ಭಕ್ಕೆ ತಕ್ಕದಾದ ವಿಶೇಷ ಅರ್ಥವನ್ನು ಕೊಡುತ್ತದೆ. ನುಡಿಗಟ್ಟುಗಳ ಬಳಕೆಯಿಂದ ಭಾಷೆಯ ಬಂಧ ಮತ್ತು ಸೊಬಗು ಹೆಚ್ಚಾಗುತ್ತದೆ ನುಡಿಗಟ್ಟಿನಲ್ಲಿ ಸೇರಿರುವ ಪದಗಳ ಅರ್ಥಕ್ಕಿಂತ ನುಡಿಗಟ್ಟಿನ ಅರ್ಥ ಬೇರೆಯಾಗಿರುತ್ತದೆ. ನುಡಿಗಟ್ಟಳ ಗಾದೆಗಳ ಜೋಡಿಪದಗಳು ಬಳಕೆ ಬರವಣಿಗೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ.

**ಉದಾ:**

ಸ್ವಾಮಿ ರಾಣಿ ಅಬ್ಬಕ್ಕ ದೇವಿ ಸ್ವತಃ ರಣಚಂಡಿಯಾಗಿ ಕಾದಾಡುತ್ತಿದ್ದಾಳೆ, ಮೊಗವೀರರು ಸಮುದ್ರಕ್ಕೆ ಬೆಂಕಿ ಹಚ್ಚಿದ್ದಾರೆ, ಗಾಳಿ ಅವರ ಸಹಾಯಕ್ಕಿದೆ. ನಮ್ಮ ಹತ್ತಾರು ಹಡಗುಗಳು ಸುಟ್ಟು ಬೂದಿಯಾಗಿ ಸಮುದ್ರದಲ್ಲಿ ಮುಳಿಗಿದವು. ಸೈನಿಕರು ಜೀವ ಉಳಿಸಿಕೊಳ್ಳಲು ಹಾರಿದ್ದಾರೆ.

ಅಬ್ಬಕ್ಕ ದೇವಿ ಕರಾವಳಿ ಕೇಸರಿ, ಬೆಂಕಿಯ ಮಗಳು, ಸ್ವಾತಂತ್ರ್ಯದ ಜ್ಯೋತಿ, ಮೊಗವೀರರೋ ಸ್ವಾತಂತ್ರ್ಯದ ಕಿಡಿಗಳು, ಇಂತಹವರನ್ನು ಪಡೆದ ಈ ನಾಡು ಧನ್ಯ. ಉಳ್ಳಾಲಕ್ಕ ಜಯವಾಗಲಿ ರಾಣಿ ಅಬ್ಬಕ್ಕ ದೇವಿಗೆ ಜಯವಾಗಲಿ ಧ್ವನಿ ಪ್ರತಿ ಧ್ವನಿಸುತ್ತದೆ.

-----------------------------------------------

ಟೈಪಿಂಗ್ ಮಾಡಿದೆ

### ಅಭ್ಯಾಸ

I ಈ ಪಾಠದಲ್ಲಿ ಬರುವ ನುಡಿಗಟ್ಟುಗಳನ್ನು ಪಟ್ಟಿಮಾಡಿ

II ಈ ಕೆಳಕಂಡ ವಾಕ್ಯಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿ.

೧. ಇರುಳೆಲ್ಲ ಎಚ್ಚೆತ್ತು ಆರ್ಭಟಿಸುತ್ತಿದ್ದ ಕಡಲೆಲ್ಲ ನಿದ್ರಿಸುತ್ತಿದ್ದಿತು.
೨. ಅಬ್ಬಕ್ಕ ದೇವಿಯ ಮುಖ ಸಿಟ್ಟಿನಿಂದ ಕೆಂಪೇರಿತು.
೩. ಪೋರ್ಚುಗೀಸರ ಹಡಗುಗಳು ನದಿ ಮುಖಕ್ಕೆ ಬಂದಿವೆ.

III ನಿಮಗೆ ಗೊತ್ತಿರುವ ನುಡಿಗಟ್ಟುಗಳನ್ನು ಬಳಸಿಕೊಂಡು ಒಂದು ಕಿರು ಟಿಪ್ಪಣಿಯನ್ನು ಬರೆಯಿರಿ.

IV ಕಠಿಣ ಪದಗಳಿಗೆ ಅರ್ಥ ಬರೆಯಿರಿ.

- ಗಂಡಾಂತರ –
- ದರ್ಪ –
- ಆಜ್ಞಾಪಿಸು –
- ಕಾದಾಡು –
- ಶಂಕೆ–
- ಒಳಸಂಚು –
- ಕಿಚ್ಚು –
- ಕೆಚ್ಚೆದೆ –

---

### ಅಭ್ಯಾಸ:

I ಬಿಟ್ಟ ಸ್ಥಳಗಳನ್ನು ತುಂಬಿರಿ.

೧. ಆನೆಗಳನ್ನು ಹಿಡಿಯಲು ---------- ವಿಧಾನಗಳಿವೆ.
೨. ಆನೆಗಳು ---------- ಇಲ್ಲದೆ ಸೊರಗುತ್ತವೆ.
೩. ಖೆಡ್ಡಾ ವಿಧಾನದಿಂದ ಆನೆಗಳನ್ನು ಹಿಡಿಯುವುದು ಅತ್ಯಂತ ---------- ಕೆಲಸ.
೪. ಆನೆಗಳನ್ನು ಹಿಡಿಯುವಾಗ ಅವುಗಳ---------- ಕೇಳಬೇಕು.
೫. ಗುಂಡಿಗಳಲ್ಲಿ ಬಿದ್ದ ಆನೆಗಳಿಗೆ ---------- ಆಗುವುದುಂಟು.

**II ಪದದ ಸರಿಯಾದ ರೂಪದೊಂದಿಗೆ ವಾಕ್ಯಗಳನ್ನು ಪೂರ್ಣಗೊಳಿಸಿ.**

೧. ಆನೆಗಳು --------- ಜಾಗವನ್ನು ಗುರುತಿಸುತ್ತಾರೆ (ವಾಸ)
೨. ಆನೆಗಳಿಗೆ -------ಕಬ್ಬು, ಜೋಳ ಕೊಡುತ್ತಾರೆ. (ಇಷ್ಟ)
೩. ಆನೆಗಳು ಒಳಕ್ಕೆ -------ಕೂಡಲೆ ಬಾಗಿಲು ಮುಚ್ಚುತ್ತಾರೆ (ನುಗ್ಗು)
೪. ಆನೆಗಳ ಗರ್ಜನೆಯನ್ನು ಕೇಳಿ ಜನ------- ಬೀರುವುದುಂಟು (ಭಯ)
೫. ಸಾಕಿದ ಆನೆಗಳನ್ನು ಕಾಡಾನೆಗಳನ್ನು ---------- ತರುತ್ತವೆ. (ಅಂಕೆ)

**III ಹೊಂದಿಸಿ ಬರೆಯಿರಿ**

| 'ಅ' | 'ಆ' |
|---|---|
| ೧. ಆನೆ ನಡೆಸುವವನು | – ಸಾರಥಿ |
| ೨. ಕುದುರೆ ಓಡಿಸುವವನು | – ಕುರುಬ |
| ೩. ರಥ ಓಡಿಸುವವನು | – ಅಂಬಿಗ |
| ೪. ದೋಣಿ ನಡೆಸುವವನು | – ಮಾವುತ |
| ೫. ಕುರಿ ಕಾಯುವವನು | – ಸವಾರಿ |

**IV ಮಾದರಿಯನ್ನು ಅನುಸರಿಸಿ ಕೆಳಗಿನ ಪದಗಳೆನ್ನುಗೆ ಸೂಕ್ತ ಪದಗಳನ್ನು ಬರೆಯಿರಿ.**

೧. ಆನೆ – ಘೀಂಕರಿಸುತ್ತದೆ
೨. ಕುದುರೆ –
೩. ಸಿಂಹ –
೪. ಹಾವು –
೫. ಕತ್ತೆ –
೬. ನಾಯಿ

**V ಕಠಿಣ ಪದಗಳ ಅರ್ಥ ಬರೆಯಿರಿ**

೧. ಸೊರಗು –
೨. ಜೇಡು –
೩. ಕಂದಕ –
೪. ಇರುಳು –
೫. ಸೌಕರ್ಯ –

VI ನಿಮಗೆ ಗೊತ್ತಿರುವ ಯಾವುದಾದರು ಬೇಟೆಯ ವಿಧಾನವನ್ನು ಕುರಿತು ಸಂಕ್ಷಿಪ್ತವಾಗಿ ಬರೆಯಿರಿ.

-------------------------------------------------------------------

**ಅಭ್ಯಾಸ**

**I ಆವರಣದಲ್ಲಿ ಕೊಟ್ಟಿರುವ ಸೂಕ್ತ ಪದದೊಂದಿಗೆ ಬಿಟ್ಟಸ್ಥಳವನ್ನು ತುಂಬಿರಿ.**

೧. ಸರ್. ಎಂ. ವಿಶ್ವೇಶ್ವರಯ್ಯನರು -------- ರಲ್ಲಿ ಜನಿಸಿದರು.
(೧೮೮೪, ೧೮೬೧)

೨. ವಿಶ್ವೇಶ್ವರಯ್ಯನವರು ಮೈಸೂರಿನಲ್ಲಿ ----------- ಆಗಿದ್ದರು.
(ಮಂತ್ರಿ, ದಿವಾನರು)

೩. ವಿಶ್ವೇಶ್ವರಯ್ಯನವರು --------- ಅಣೆಕಟ್ಟನ್ನು ಕಟ್ಟಿಸಿದರು.
(ತುಂಗ ಭದ್ರ, ಕನ್ನಂಬಾಡಿ)

೪. ವಿಶ್ವೇಶ್ವರಯ್ಯನವರು ಮೈಸೂರಿನ --------- ಪ್ರಗತಿಗೆ ಶ್ರಮಿಸಿದರು.
(ಸರ್ವತೋಮುಖ, ಏಕಮುಖ)

**II ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ.**

೧. ವಿಶ್ವೇಶ್ವರಯ್ಯನವರು ಎಲ್ಲಿ ಹುಟ್ಟಿದರು ?

೨. ವಿಶ್ವೇಶ್ವರಯ್ಯನವರು ಯಾವುದರಿಂದ ಜನಪ್ರಿಯರಾದರು.

೩. ವಿಶ್ವೇಶ್ವರಯ್ಯನವರು ಹೇಗೆ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಂಡರು?

೪. ಯಾವ ನದಿಗೆ ಅಣೆಕಟ್ಟನ್ನು ಕಟ್ಟಿದರು.

**III ಕಠಿಣ ಪದಗಳಿಗೆ ಅರ್ಥ ಬರೆಯಿರಿ.**

ದಯೆ –

ಪ್ರತಿಭೆ –

ನನಸು –

ವ್ಯವಸಾಯ –

ಅಸಂಖ್ಯಾತ –

**IV ಬೆಳೆಯುವ ಸಿರಿ ಮೊಳಕೆಯಲ್ಲಿ ಈ ನಾಣ್ನುಡಿಯನ್ನು ವಿಸ್ತರಿಸಿ ಬರೆಯಿರಿ.**

V ನಿಮಗೆ ಗೊತ್ತಿರುವ ಮತ್ತೊಬ್ಬ ಇಂತಹ ವ್ಯಕ್ತಿಯ ಬಗ್ಗೆ ಪರಿಚಯ ಮಾಡಿಕೊಡಿ

-----------------------------------------------------

**ಅಭ್ಯಾಸಗಳು**

**I ಬಿಟ್ಟ ಸ್ಥಳ ತುಂಬಿರಿ**

೧. ಮನುಷ್ಯ ---------- ಜೀವಿ.
೨. ಕಲೋಪಾಸಕನಲ್ಲಿ ------------- ಕಲ್ಯಾಣವನ್ನು ಪೋಷಿಸುವ ಶಕ್ತಿ ಇರುತ್ತದೆ.
೩. ಮನವನ್ನು ಹತ್ತು ಸಲ ಪರೀಕ್ಷಿಸಿ ದಾನವನ್ನು ಸ್ವೀಕರಿಸಬೇಕು.
೪. ತಪ್ಪಡಿಯಿಟ್ಟೊಡನೆ ಅವರ ತಲೆಗೆ --------- ಕಟ್ಟಲಾಗುತ್ತದೆ.
೫. ಅಂತರ್ಜೀವಿಗೆ ಉಳಿದವರ -------- ನೋಡಿಕೊಳ್ಳುವುದು ಒಂದು ಸಮಸ್ಯೆ.

**II ಕಠಿಣ ಪದಗಳಿಗೆ ಅರ್ಥ ಬರೆಯಿರಿ.**

ಹೊರೆ –
ಚಿಂತೆ –
ಅನ್ಯರು –
ಹೊಣೆ –
ವ್ಯಾಸಂಗ –
ಓರಣ –
ಕಾಯಕ –
ಮಾರ್ಗ –

**III ಈ ಪಾಠದ ನೀತಿಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

**IV ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ.**

ಅಂತರ್ಮುಖಿ X ಆಸೆ X

ಪ್ರೀತಿ X ವಿಶಾಲ X

ಸುಲಭ X ಸಾಧ್ಯ X

-----------------------------------

**ಅಭ್ಯಾಸಗಳು**

I ನಿಮ್ಮ ಶಾಲೆಯಲ್ಲಿ ಕೈಗೊಂಡ ಶೈಕ್ಷಣಿಕ ಪ್ರವಾಸದ ಬಗ್ಗೆ ನಿಮ್ಮ ಪೋಷಕರಿಗೆ ಒಂದು ಪತ್ರ ಬರೆಯಿರಿ.

**II ಹೊಂದಿಸಿ ಬರೆಯಿರಿ.**

೧. ವಿಶ್ವೇಶ್ವರಯ್ಯ – ರಂಗಮಂದಿರ
೨. ಪಕ್ಷಿಕಾಶಿ – ಹುಲಿ, ಸಿಂಹ, ಚಿರತೆ ಇತ್ಯಾದಿ ಪ್ರಾಣಿಗಳು ಇರುವ ಸ್ಥಳ
೩. ಜಗನ್ಮೋಹನ ಅರಮನೆ – ವಿದ್ಯಾಕೇಂದ್ರ
೪. ಮೃಗಾಲಯ – ಕನ್ನಂಬಾಡಿ ಅಣೆಕಟ್ಟು
೫. ಮಾನಸಗಂಗೋತ್ರಿ – ರಂಗನತಿಟ್ಟು

**III ಸೂಕ್ತ ಪದದೊಂದಿಗೆ ಬಿಟ್ಟ ಸ್ಥಳ ತುಂಬಿರಿ.**

೧. ಚಾಮುಂಡಿ ಬೆಟ್ಟ ------------- ಸೊಬಗನ್ನು ನೀಡಿದೆ (ನಗರ)
೨. ದಸರ --------- ದೃಶ್ಯಗಳು ಮನಸೂರೆಗೊಳ್ಳುತ್ತವೆ. (ಉತ್ಸವ)
೩. ಚಾಮುಂಡಿ ಬೆಟ್ಟದಲ್ಲಿ --------- ನಂದಿ ವಿಗ್ರಹವಿದೆ (ಭವ್ಯ)
೪. ಉಳಿದ ವಿಷಯವನ್ನು --------- ಪತ್ರದಲ್ಲಿ ತಿಳಿಸುತ್ತೇನೆ (ಮುಂದೆ)
೫. ಮೈಸೂರು ------------ ರಾಜಧಾನಿ (ಸಂಸ್ಕೃತಿ)

----------------------------------------

**ಅಭ್ಯಾಸಗಳು:**

I ನೀವು ನೋಡಿದ ಯಾವುದಾದರು ಐತಿಹಾಸಿಕ ಪ್ರವಾಸಿ ತಾಣವನ್ನು ಕುರಿತು ನಿಮ್ಮ ಸ್ನೇಹಿತರಿಗೆ ಪತ್ರ ಬರೆಯಿರಿ.

II ಈ ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ಪ್ರವಾಸ ಸಾಹಿತ್ಯ ಎಂದರೇನು ?

೨. ಬಿಸಿಲಿನ ತಾಪವನ್ನು ಹೇಗೆ ವರ್ಣಿಸಿದ್ದಾರೆ.?
೩. ಜಯಪುರದಲ್ಲಿನ ಜನರು ಧರಿಸುವ ಉಡುಪುಗಳ ಬಗ್ಗೆ ಬರೆಯಿರಿ.
೪. ಮೀರಾ ಭಾಯಿಯ ದೇವಾಲಯವನ್ನು ಕುರಿತು ಬರೆಯಿರಿ.
೫. ರಜಪೂತಾನರ ಅರಮನೆಯ ಸೊಬಗನ್ನು ವಿವರಿಸಿ.

III ಕರ್ನಾಟಕದ ಯಾವುದಾದರು ಒಂದು ಜಾಪನದ ನೃತ್ಯದ ಬಗ್ಗೆ ಪರಿಚಯ ಮಾಡಿಕೊಡಿ.

**IV ಸ್ವಂತ ವಾಕ್ಯದಲ್ಲಿ ಬರೆಯಿರಿ.**

- ಸಂಜೆಯಾಗುತ್ತಲೆ
- ನಮಗಾಗಿಲ
- ಮುಖ್ಯ ಬೀದಿ
- ನೇರವಾದ
- ಶೈಲಿ
- ಬಣ್ಣಗಾರರು
- ಗಂಭೀರವಾಗಿ
- ಪೂರ್ವಕಾಲದ
- ಆನವಸತಿ
- ಶಾಂತವಾಗಿ

**ಬರಹ/ಬರವಣಿಗೆಯ ಕೌಶಲ**

ಬರವಣಿಗೆ ಮಾನವ ಅಭಿವ್ಯಕ್ತಿಯ ಶಿಷ್ಟ ಹಂತ, ಬರವಣಿಗೆಂಬ ಭಾಷೆಯ ಒಂದು ಪ್ರಮುಖ ಅಭಿವ್ಯಕ್ತಿ ಸಾಧನ. ಯಾವುದೇ ಒಂದು ವಿಷಯ, ಆಲೋಚನೆ, ಕಲ್ಪನೆ, ಅಭಿಪ್ರಾಯಗಳನ್ನು ಅಕ್ಷರಗಳ ಬಳಕೆಯಿಂದ ಕ್ರಮಬದ್ಧವಾಗಿ ಜೋಡಿ ಬರೆಯುವುದೇ ಬರವಣಿಗೆ, ಬರವಣಿಗೆ ಎಂದ ತಕ್ಷಣ ಇಲ್ಲಿ ಕೈ, ಕಣ್ಣು, ಮನಸ್ಸು ಒಂದಕ್ಕೊಂದು ಸಮನ್ವಯಗೊಂಡಲ್ಲಿ ಬರವಣಿಗೆ ಸಾಧ್ಯವಾಗುವುದು ಭಾಷಾ ಕಲಿಕೆಯ/ಬೋಧನೆಯ ಉಳಿದ ಎಲ್ಲ ಕೌಶಲಗಳಿಗಿಂತ ಈ ಕೌಶಲ ಭಾಷೆಯ ಬೆಳವಣಿಗೆಯಲ್ಲಿ ಮಹತ್ತರವಾದ ಸ್ಥಾನ ಹೊಂದಿದೆ. ಬರವಣಿಗೆಯೇ ಇಲ್ಲದ ಭಾಷೆಗೆ ಶಾಶ್ವತೆಯಾ ಕೂಡ ಇಲ್ಲ. ಬರವಣಿಗೆಯಿಂದಲೆ ಭಾಷೆಗಳು ತಮ್ಮ ಅಸ್ತಿತ್ವವನ್ನು ಹೊಂದುತ್ತವೆ. ಯಾವೊಂದು ಭಾಷೆಯ ಶಾಶ್ವತವಾಗಿ ಉಳಿಯ ಬೇಕೆಂದರೆ ಆ ಭಾಷೆಗೆ ಬರವಣಿಗೆಯ ಮುಖ್ಯ ಸಾಧನೆ. ಇತಿಹಾಸ, ಸಂಸ್ಕೃತಿ, ಪರಂಪರೆ ಜ್ಞಾನ ರಾಶಿ ಎಲ್ಲರಿಗೂ ಸೇರುವಂತೆ ಎಲ್ಲ ಕಾಲಗಳಲ್ಲಿಯೂ ಉಳಿಯುವಂತೆ ಮಾಡುವ ಕಾರ್ಯ ಬರವಣಿಗೆಯಿಂದ ಸಾಧ್ಯವಾಗಿದೆ. (ಶಾಸನ, ತಾಳೆಗರಿ, ತಾಮ್ರ ಪತ್ರ etc.)

ಬರಹ/ಬರವಣಿಗೆ ಅಷ್ಟು ಸುಲಭವಲ್ಲ ಅದು ಒಂದು ಸಾಧನೆಯ ಹಸ್ತಪ್ರತಿ. ಮಾತನಾಡಲು/ಗ್ರಹಿಸಲು ಅರ್ಥ ಮಾಡಿಕೊಳ್ಳು ಒಂದಾಕ್ಷರ ಓದಲು ಬರೆಯಲು ಒಂದಾಕ್ಷಣ ಮಾತನಾಡಲು, ಗ್ರಹಿಸಿಕೊಳ್ಳಲು ಅರ್ಥಮಾಡಿಕೊಳ್ಳಲು ಬರುತ್ತದೆ ಎಂದು ಭಾವಿಸಲು ಆಗುವುದಿಲ್ಲ. ಮಾನವನ ಪರಿಶ್ರಮ ಇಚ್ಚಾಶಕ್ತಿ ಇದ್ದರೆ ಮಾತ್ರ ಇದೆಲ್ಲ ಸಾಧ್ಯವಾಗುತ್ತವೆ.

ಭಾಷಾ ಕೌಶಲಗಳು ಒಂದನ್ನು ಬಿಟ್ಟು ಒಂದು ಇಲ್ಲ. ಅವು ಇಲ್ಲವು ಒಂದಕ್ಕೊಂದು ಸೇರಿಕೊಂಡಿವೆ. ಭಾಷಾ ಕಲಿಕೆಯಲ್ಲಿ ಇವುಗಳು ತಮ್ಮದೆ ಸ್ಥಾನವನ್ನು ಹೊಂದಿ ಅವುಗಳ ಮಹತ್ವವನ್ನು ಸಾಗುತ್ತವೆ. ಇವುಗಳಲ್ಲಿ ಬರವಣಿಗೆಯ ಒಂದು ಪ್ರತ್ಯೇಕವಾದ ಸ್ಥಾನ ಹೊಂದಿದೆ. ಬರವಣಿಗೆ ಅಭಿಯಕ್ತಿಯ ಸಾಮರ್ಥ್ಯವನ್ನು ಬೆಳೆಸುವುದರೊಂದಿಗೆ ಸೌಂದರ್ಯ ಪ್ರಜ್ಞೆ, ಕಲ್ಪನೆ ಸೃಜನಾತ್ಮಕ ಶಕ್ತಿಯನ್ನು ಬೆಳೆಸುವುದರಿಂದ ಬರವಣಿಗೆ ಒಂದು ನಾಣ್ಯದ ಎರಡು ಮುಖಗಳಿಂದಂತೆ ಭಾವನೆಗಳನ್ನು ಭಾಷೆಯ ಮೂಲಕ ವ್ಯಕ್ತ ಪಡಿಸುವಿಕೆ ಒಂದಾದರೆ ಬರವಣಿಗೆಯಲ್ಲಿ ಅದನ್ನು ನಿರೂಪಿಸುವುದು ಇನ್ನೊಂದಡೆಯಾಗಿದೆ. ಬರೆಯುವ ಕೌಶಲ ಅಷ್ಟೇನು ಸುಲಭವಾದುದ್ದಲ್ಲ. ಇದಕ್ಕೆ ಅವಿರತ ಅಭ್ಯಾಸ ಆಯಾ ಭಾಷೆಯ ವಿಷಯ ಪದಕೋಟಿ ಪದಕೋಶ, ವಿಷಯ ಗ್ರಹಣ, ವ್ಯಾಕರಣ ವಿರಾಮ ಚಿಹ್ನೆ, ಉದ್ದೇಶಕ್ಕೆ ತಕ್ಕ ಭಾಷೆ, ಪದಗಳ ಜೋಡಣೆ ಎಲ್ಲವು ಅವಶ್ಯಕ, ಭಾಷಾ ಬೋಧನೆ ಕೇವಲ ಪರೀಕ್ಷಾ ವಿಷಯವಾಗಿರದೆ ಅದು ದೈನಂದಿನ ಉಸಿರು ಎಂಬ ಭಾವನೆ ನೆಲೆಗೊಂಡರೆ ಮಾತ್ರಭಾಷೆ, ನಾಡುನುಡಿಯ ಜ್ಞಾನ ತಾನೇ ತಾನಾಗಿ ನೆಲೆಗೊಳ್ಳುತ್ತದೆ. ವಿಷಯ ನಿರೂಪಣೆಯ ಜೊತೆಗೆ ಆಗುವ ತಪ್ಪುಗಳ ಸಾಧ್ಯತೆಯನ್ನು ತಿಳಿಯುವುದು ಅವಶ್ಯಕವಾಗಿದೆ.

ಯಾವುದೇ ಒಂದು ವಿಷಯವನ್ನು ನಿರೂಪಿಸುವಾಗ ವಾಕ್ಯರಚನೆ, ಪದಗಳ ಬಳಕೆ, ಖಂಡಿಕೆಗಳ ವರ್ಗೀಕರಣ, ವಿಷಯ ಮಂಡಣೆ ವಿರಾಮ ಚಿಹ್ನೆಗಳು ಎಲ್ಲವೂ ಮುಖ್ಯವಾಗಿರುತ್ತದೆ. ಬರವಣಿಗೆ ಸ್ಪಷ್ಟವಾಗಿರಬೇಕು ಬರೆದದ್ದು ಓದಿ ಅರ್ಥಮಾಡಿಕೊಳ್ಳುವಂತೆ ಇರಬೇಕು. ಬರವಣಿಗೆಯ ಅಭ್ಯಾಸ ಬೆಳೆಸುವುದರ ಜೊತೆ ಮೌಲ್ಯಮಾಪನ ಮಾಡಲು ಅರಿತಿರಬೇಕು. ಭಾಷೆಗಳಲ್ಲಿನ ಸಾಮ್ಯತೆ ಮತ್ತು ವ್ಯತ್ಯಾಸಗಳ ಕಡೆಗಮನ ನೀಡಬೇಕು (ನಿತ್ಯ ಬಳಕೆಯ/ಸಾಹಿತ್ಯದ ಭಾಷೆ) ಪದಗಳ ಜೋಡಣೆ, ಅರ್ಥ ಮತ್ತು ಬಳಕೆ ತಿಳಿದಿದ್ದರೆ ಬರವಣಿಗೆ ಪೂರ್ಣಗೊಳ್ಳುತ್ತದೆ. ವಿಷಯದ ಬಗ್ಗೆ ಆಲೋಚನೆ ವಿವೇಚನೆ ಇಲ್ಲದೆ ಮಾಡಿದ ಬರವಣಿಗೆ ಅಲ್ಲ. ಬರವಣಿಗೆ ವಿಷಯದ ಸಂಕ್ಷಿಪ್ತತೆಯನ್ನು ಹೊಂದಿರಬೇಕು. ವಿಚಾರಗಳು ಸಾಗಲು ಬೇಕಾದ ಮತ್ತು ವಿಚಾರಗಳು ಸಮನ್ವಯಗೊಳ್ಳಲು ಅವಶ್ಯವಿರುವ ಪದಗಳನ್ನು ಸೂಕ್ತವಾಧ ರೀತಿಯಲ್ಲಿ ಬಳಸುವುದು ಹಾಗೂ ವಿಚಾರಗಳ ನಿರಂತರತೆಯನ್ನು ಕಾಪಾಡುವುದು ಮುಖ್ಯವಾದ ಅಂಶವಾಗಿದೆ ಅವಶ್ಯವಿರುವಲ್ಲಿ ಶೀರ್ಷಿಕೆ, ಅಡಿಟಪ್ಪಣಿಯನ್ನು ಸ್ಪಷ್ಟವಾಗಿ ನಮೂದಿಸಬೇಕು. ಬರವಣಿಗೆ ವೈವಿಧ್ಯಮಯವಾಗಿದೆ. ಗದ್ಯ-ಪದ್ಯ, ನಾಟಕ, ಕತೆ, ಕಾದಂಬರಿ, ಪತ್ರ ಬರಹ, ವೃತ್ತ ಪತ್ರಿಕೆಗಳ ಬರಹ ಎಲ್ಲವೂ ಬಿನ್ನವಾಗಿದೆ. ಎಲ್ಲವೂ ತಮ್ಮದೆಯಾದ ಶೈಲಿ ವ್ಯಾಕರಣ ಪದಕೋಟಿಯನ್ನು ಹೊಂದಿವೆ. ಇಷ್ಟೆ ಅಲ್ಲ ಅಕ್ಷರಗಳನ್ನು ಬರೆಯಲು ಸಹ ನಿಯಮಗಳಿವೆ. ಹಾಗೆ ಬರೆದಲ್ಲಿ ಮಾತ್ರ ಬರವಣಿಗೆ ಶುದ್ಧಗೊಳ್ಳುತ್ತದೆ ಬರವಣಿಗೆ ಉತ್ತಮಗೊಳ್ಳಬೇಕೆಂದರೆ ಬರೆದದ್ದನ್ನೇ ಮತ್ತೆ ಮತ್ತೆ ಓದಬೇಕು ಮತ್ತು ಪರಿಪಡಿಸಬೇಕು.

ವಿಷಯ ನಿರೂಪಣಾ ವಿಧಾನ ಪರಿಣಾಮಕಾರಿಯಾಗಿದ್ದು ಸನ್ನಿವೇಶ, ವಿಷಯ, ವೈವಿಧ್ಯಕ್ಕೆ ತಕ್ಕಂತೆ ರಸಭಾವನೆಗಳನ್ನು ಹೊಂದಿರಬೇಕು. ವಿಷಯ ಸಂಗ್ರಹ, ವಿಷಯ ವಿಸ್ತಾರ, ಶೈಲಿ, ಸಂಕ್ಷಿಪ್ತತೆ

ಪದಗಳ ಜೋಡಣೆ ಮುಂತಾದ ಅಂಶಗಳು ಸತ್ವಪೂರ್ಣಗೊಂಡಾಗ ಉತ್ತಮ ಬರವಣಿಗೆಯ ಸೃಷ್ಟಿಯಾಗುತ್ತದೆ.

ವಿಷಯ ಆಯ್ಕೆ ಆದ ನಂತರ ಅದು

**ಪೀಠಿಕೆ**

**ವಿಷಯ ನಿರೂಪಣೆ**

ಉಪಸಂಹಾರ ಹೀಗೆ ಮುಂದುವರಿಯಬೇಕು.

ಈ ಮೂರು ವಿಭಾಗಗಳಲ್ಲಿ ಬರವಣಿಗೆ ಸಾಗಬೇಕು. ಇದು ಬರವಣಿಗೆಯ ವಿಷಯಕ್ಕೆ ತೊಡಕಾಗಬಾರದು. ಭಾವನೆಗಳು ಕಲಸು ಮೇಲೋಗರವಾಗಬಾರದು ಅಂತೆಯೇ ಭಾಷೆಯೂ ಶುದ್ಧವಾಗಿರಬೇಕು.

ವಿಷಯ ನಿರೂಪಣಾ ವಿಧಾನ ಗಂಭೀರವಾಗಿಯೂ ಇರಬೇಕು. ಸನ್ನಿವೇಶ ವಿಚಾರ ವೈವಿಧ್ಯಕ್ಕೆ ತಕ್ಕಂತೆ ರಸಭಾವನೆಗಳನ್ನು ಹೊಂದಿರಬೇಕು. ವಿಷಯ ಸಂಗ್ರಹ, ವಿಷಯ ವಿಸ್ತಾರ, ಸರಳ ಶೈಲಿ ಸಂಕ್ಷಿಪ್ತತೆ ಸುಸಂಬದ್ಧತೆಗಳೊಂದಿಗೆ ವಿಷಯದ ಜೋಡಣೆ ಮುಂತಾದ ಅಂಶಗಳು ಸತ್ವ ಪೂರ್ಣವಾದಾಗ ಉತ್ತಮ ಬರವಣಿಗೆಯ ಸೃಷ್ಟಿಯಾಗುತ್ತದೆ.

೧. ಬರಹದ ಪೂರ್ವ: ವಿಷಯ, ಸಂಗ್ರಹಣೆ, ಅದರ ಜೊತೆಗೆ ಇರಬಹುದಾದ ಇತರೆ ಮಾಹಿತಿ ಇವುಗಳಿದ್ದರೆ ಕ್ರಮವಾಗಿ ತರ್ಕಬದ್ಧವಾಗಿ ಯೋಚಿಸಿ ನಿರೂಪಿಸಬೇಕು.
೨. ಬರಹ: ಸಂಗ್ರಹಿತ ಮಾಹಿತಿಗೆ ಒಂದು ರೂಪವನ್ನು ನೀಡುವುದು ಭಾಷಿಕ ಶೈಲಿ, ಬರವಣಿಗೆಯ ನಿಯಮಗಳ ಪಾಲನೆ.
೩. ಬರಹದ ನಂತರ: ಈ ಹಂತದಲ್ಲಿ ಏನಾದರೂ ಬದಲಾವಣೆಗಳು ಮುಖ್ಯವಾಗಿದೆ ಸ್ಪಷ್ಟತೆಗಳು ಅವಶ್ಯವೆನಿಸಿದ್ದಲ್ಲಿ ಅವುಗಳನ್ನು ಅಳವಡಿಸಿಕೊಳ್ಳುವುದು.

ಈ ಮೂರು ಕ್ಷೇತ್ರಗಳಲ್ಲಿ ಬರುವ ವಿಧಗಳು ಒಂದರ ಮೇಲೆ ಒಂದು ಬರುವಂತೆ ಕಾಣುತ್ತವೆ ಹಾಗೂ ಅವುಗಳಲ್ಲಿ ಒಂದನ್ನು ಬಿಟ್ಟು ಒಂದು ಹೇಳುವಂತೆಯೂ ಇಲ್ಲ. ವಿದ್ಯಾರ್ಥಿಗಳಿಗೆ ಎಲ್ಲ ವಿಧಗಳನ್ನು ಪರಿಚಯಿಸಲೇಬೇಕು.

ಬರವಣಿಗೆ ಎಷ್ಟು ಸರಳವೋ ಅಷ್ಟೇ ಕ್ಲಿಷ್ಟ ಕೂಡ ಯಾವುದೇ ಬರವಣಿಗೆಯನ್ನು ಪ್ರಾರಂಭಿಸುವ ಮುನ್ನ ಬರವಣಿಗೆಯ ವಿಷಯ ಅದನ್ನು ಯಾರಿಗಾಗಿ ಸಿದ್ಧ ಪಡಿಸಲಾಗುತ್ತಿದೆ, ಇದರ ಓದುಗರಾರೂ ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಅಂದರೆ ಮಾತ್ರ ಬರವಣಿಗೆ ಪರಿಪೂರ್ಣವಾಗುವುದು ಬರವಣಿಗೆಯ ಮುನ್ನ ಬರಹದ ಪೂರ್ವ, ಬರಹ ಮತ್ತು ಬರಹದ ನಂತರದ ಹಂತಗಳಲ್ಲಿ ಗಮನದಲ್ಲಿಟ್ಟುಕೊಂಡು ಬರವಣಿಗೆಯ ವಿಷಯ, ಶೈಲಿ, ಭಾಷಿಕ ಅಂಶಘಳನ್ನು ಅಳವಡಿಸಿಕೊಂಡಲ್ಲಿ ಪರಿಣಾಮಕಾರಿಯಾದ ಫಲಿತಾಂಶವನ್ನು ಹೊಂದಬಹುದು. ಈ ಪರಿಣಾಮಕಾರಿ ಎಂದರೆ– ವಿಷಯ ಬೇಕಾದ ಮಾಹಿತಿ, ಭಾಷಾಂತರ ನಿಖರತೆ, ಸನ್ನಿವೇಶ, ವಿಚಾರಗಳ ಮಂಡಣೆ ಇತ್ಯಾದಿ, ಈ ಎಲ್ಲವುಗಳ ಆಧಾರದ ಮೇಲೆ ಮಾದರು ಪಾಠ ರಚನೆ ಕಾರ್ಯ ಕೈಗೊಳ್ಳವುದಾಗಿದೆ.

ಬರವಣಿಗೆ ಅಭಿವ್ಯಕ್ತಿಯ ಇದು ಒಂದು ಹೊಸ ಸೃಷ್ಟಿಯ ಕೌಶಲವಾಗಿದೆ. ಓದುವಿಕೆ ಗ್ರಹಿಕೆಯನ್ನು ಹೊಂದಿದೆ ಬರವಣಿಗೆ ಭಾಷೆಯ ಮೂಲಕ ಭಾವನೆಗಳ ಅಭಿವ್ಯಕ್ತಿಯ ನಿರೂಪಣೆಯಾಗಿ ಪ್ರೌಢಶಾಲಾ ಹಂತದಲ್ಲಿನ ಬರವಣಿಗೆ ಸಣ್ಣ ಖಂಡಿಕೆಗಳ ಬರವಣಿಗೆ ನಿರೂಪಣೆ, ಚಿಕ್ಕ/ಸಣ್ಣ ಸಣ್ಣ ಸಂಭಾಷಣೆಗಳ ಬರವಣಿಗೆ, ಮಾರ್ಗದರ್ಶಿಕ ಬರವಣಿಗೆ, ಮುಕ್ತ ಲೇಖನಗಳ ಬರವಣಿಗೆ ಇತ್ಯಾದಿಗಳನ್ನು ಹೊಂದಿರುತ್ತದೆ. ಇದರ ಜೊತೆ ಜೊತೆಗೆ ವಿದ್ಯಾರ್ಥಿಗಳು ವಿಮರ್ಶಾತ್ಮಕ ಬರವಣಿಗೆಯನ್ನು ರೂಢಿಸಿಕೊಳ್ಳುವುದು ಅವಶ್ಯ. ಈ ಎಲ್ಲ ಚಟುವಟಿಕೆಗಳಲ್ಲಿ ವಿದ್ಯಾರ್ತಿ ತನ್ನನ್ನು ತಾನೆ ತೊಡಗಿಸಿಕೊಳ್ಳ ಬೇಕಾದಲ್ಲಿ ವಿದ್ಯಾರ್ಥಿ ತನ್ನಲ್ಲಿ ಆ ಸಾಮರ್ಥ್ಯವನ್ನು ಬೆಳಸಿ/ರೂಢಿಸಿಕೊಳ್ಳಬೇಕಾಗುತ್ತದೆ. ಇವುಗಳಿಗೆ ಬೇಕಾದ ಭಾಷೆ, ಪದಕೋಷ, ಭಾಷೆಯ ರಚನೆ, ಭಾಷಿಕ ಶೈಲಿಗಳ ಜ್ಞಾನವನ್ನು ಪಡೆದಿರಬೇಕು ಇದರೊಂದಿಗೆ ಭಾಷೆಯಲ್ಲಿ ಬಳಕೆಗೊಳ್ಳುವ ನುಡಿಗಟ್ಟುಗಳು ಗಾದೆಗಳು, ಪದ, ಪದ ಪುಂಜಗಳು, ಜೋಡಿ ಪದಗಳ ಬಳಕೆಯ ಬಗ್ಗೆಯೂ ಸಹ ಅರಿತಿರಬೇಕು. ಭಾಷೆಯ ಬಳಕೆ ಎಂದಾಕ್ಷಣವೆ ಅಲ್ಲಿ ಸಮಾಜ ಮತ್ತು ಸಂಸ್ಕೃತಿಯೂ ಬಂದು ಸೇರುತ್ತವೆ ಅವುಗಳತ್ತ ಕೂಡ ಗಮನ ನೀಡುವುದರ ಅಗತ್ಯವಿದೆ.

ಒಳ್ಳೆಯ ಒಂದು ಬರವಣಿಗೆ ರೂಪ ಪಡೆಯಬೇಕೆಂದರೆ ಅಲ್ಲಿ ಪದಗಳ ಬಳಕೆ ಅತ್ಯಂತ ಮಹತ್ವದ್ದಾಗಿದೆ ಪದಗಳ ಬಳಕೆ ತನ್ನದೇ ಯಾದ ಅರ್ಥವ್ಯಾಪ್ತಿಯನ್ನು ಹೊಂದಿದೆ ಸಮನಾರ್ಥಕ ಪದಗಳು ವಿರುದ್ಧಾರ್ಥಕ ಪದಗಳು ಸಮರೂಪ ಪದಗಳು-------------- ಪದಗಳು ಸಂಧರ್ಭೋಚಿತ ಬಳಕೆ ಸಂದರ್ಭಕ್ಕೆ ತಕ್ಕಂತೆ ಬಳಕೆಯಾಗಬೇಕು.

ಪ್ರಸಿದ್ಧ ಭಾಷಾ ವಿಜ್ಞಾನಿ ನೋಮ್ ಚೋಮ್ಸ್ಲ ಪ್ರಕಾರ ಭಾವನೆಗಳ/ ಅಭಿವ್ಯಕ್ತಿಗಳ ವ್ಯಕ್ತಪಡಿಸುವಿಕೆ ಈ ಕೆಳಕಂಡ ಮೂರು ಅಂಶಗಳನ್ನು ಹೊಂದಿರಬೇಕು.

ವ್ಯಾಕರಣ ಭಾಷೆಯ ರಚನೆ ೨ ವರ್ಣನಾತ್ಮಕತೆ ವಿವರಾಣತ್ಮಕತೆ

೩. ವಿವರಾಣತ್ಮಕತೆ

**I ವ್ಯಾಕರಣ**

ಬರವಣಿಗೆಗೆ ಬೇಕಾದುದು ಭಾಷೆಯ ರಚನೆ/ವ್ಯಾಕರಣ ಭಾಷೆಯ ರಚನೆ ಎಂದರೆ ಭಾಷೆಯ/ಪದಗಳ ಸೂಕ್ತ/ಸರಿಯಾದ ರೀತಿಯ ಜೋಡಣೆ ಹಾಗೂ ಬಳಕೆ, ಪ್ರತಿಯೊಂದು ಭಾಷೆಯೂ ತನ್ನದೆ ಆದ ರಚನಾತ್ಮಕ ಅಂಶವನ್ನು ಹೊಂದಿದೆ.

ಇಂಗ್ಲೀಷ್ ಭಾಷೆಯ ರಚನೆಯೇ ಬೇರೆ

ಕರ್ತೃ ಕ್ರಿಯೆ ಕರ್ಮ – ಕನ್ನಡ

ಕರ್ತೃ ಕ್ರಿಯೆ ಕರ್ಮ – ಇಂಗ್ಲೀಷ್

**II ವರ್ಣನೆ – ವರ್ಣನಾತ್ಮಕತೆ**

ವಿಷಯ ಹಾಗೂ ಸಂದರ್ಭಕ್ಕೆ ಇವುಗಳಿಗೆ ತಕ್ಕಂತೆ ವರ್ಣನೆ ಇರಬೇಕು. ಭಾಷಿಕವಾಗಿ ವರ್ಣಿಸುವಾಗ ಅದು ಸ್ಪಷ್ಟತೆಯನ್ನು ಹೊಂದಿರಬೇಕು. ದ್ವಂದ್ವಕ್ಕೆ ದಾರಿ ಇರಕೂಡದು

**III ವಿವರಣೆ/ವಿವರಣಾತ್ಮಕತೆ**

ಪರಿಣಾಮಕಾರಕವಾಗಿ ವಿಷಯ ನಿರೂಪಿಸಲು ಅವಶ್ಯವಿರುವಲ್ಲಿ ವಿಷಯ ಹಾಗೂ ಸಂದರ್ಭಕ್ಕೆ ಅನುಗುಣವಾಗಿ ವಿವರಣೆ ನೀಡಬೇಕು.

ವಿದ್ಯಾರ್ಥಿಗಳು ಈ ಮೇಲಿನ ಅಂಶಗಳನ್ನು ತಮ್ಮ ಬರವಣಿಗೆಯಲ್ಲಿ ಅಳವಡಿಸಿಕೊಂಡಲ್ಲಿ ಅವರ ಅಭಿವ್ಯಕತಿ ವಿಷಯ ಮಂಡಣೆ ಅರ್ಥಪೂರ್ಣಗೊಂಡು ಪರಿಣಾಮಕಾರಿಯಾಗಿ ಮೆಚ್ಚಿಗೆ ಪಡೆಯುವುದು ಸಾಮಾನ್ಯ ಬರವಣಿಗೆಯಾಗಲಿ ನಿರ್ದಿಷ್ಟ ಬರವಣಿಗೆಯಾಗಲಿ (ನಿರ್ದಿಷ್ಟ ಬರವಣಿಗೆ ಎಂದರೆ – ನಿಬಂಧ, ನಿರೂಪಣೆ, ಸಣ್ಣ ಕತೆ ಇತ್ಯಾದಿ) ಇವುಗಳ ಈ ಕೆಳಗಿನ ಹಂತಗಳನ್ನು ಒಳಗೊಂಡಿರುತ್ತದೆ.

೧) ಬರೆಯುವ ವಿಷಯದ ಯೋಜನೆ
೨) ವಿಷಯದ ಮುಖ್ಯ ವಿಚಾರಗಳನ್ನು ಗುರುತಿಸುವುದು
೩) ತರ್ಕಬದ್ಧವಾದ ರೀತಿಯಲ್ಲಿ ಎಲ್ಲ ವಿಚಾರಗಳನ್ನು ಶ್ರೇಣಿಸಿ ವಿಚಾರಕ್ಕೂ ಒಂದೊಂದು ಪ್ರತ್ಯೇಕ ಖಂಡಿಕೆಗಳ ರಚನೆ
೪) ಪ್ರತಿಯೊಂದು ವಿಚಾರಕ್ಕೂ ಒಂದೊಂದು ಪ್ರತ್ಯೇಕ ಖಂಡಿಕೆಗಳ ರಚನೆ
೫) ಅಗತ್ಯವಿರುವಲ್ಲಿ ಪೀಠಿಕೆ, ವಿಷಯ, ಉಪಸಂಹಾರ ವಿಟ್ಟುಕೊಂಡು ಉನ್ನತ ಹಂತದ ಬೆಳವಣಿಗೆ ಯತ್ನಸಾಗುವುದು

**I ಖಂಡಿಕೆಗಳ ಬರವಣಿಗೆ/ಬೆಳವಣಿಗೆ**

- ಪ್ರತಿಯೊಂದು ಖಂಡಿಕೆ ಒಂದೇ ವಿಷಯವನ್ನು ಹೊಂದಿರಬೇಕು.
- ನಿರೂಪಿಸುವುದನ್ನು ಸ್ಪಷ್ಟವಾಗಿ ದ್ವಂದ್ವವಿಲ್ಲದಂತೆ ಪರ್ಯಾಯ ನಿರೂಪಿಸಿ, ಸಾಧ್ಯವಾದಷ್ಟು ಸೂಕ್ತವಾದ ಸಮನಾರ್ಥಕ ಪದಗಳನ್ನು ಸರಿಯಾಗಿ ಬಳಸಿ.
- ವಿಷಯಕ್ಕೆ ಸಂಬಂಧಿಸಿದ ಇತರೆ ವಿಚಾರಗಳನ್ನು ಮುಖ್ಯ ವಿಷಯದ, ನಿರೂಪಣೆಯ ನಂತರ ನಿರೂಪಿಸಿ.
- ನಿರೂಸುವುದನ್ನು ಸಂಕ್ಷಿಪ್ತವಾಗಿ ಎರಡು ಮೂರು ವಾಕ್ಯಗಳಲ್ಲಿ ನಿರೂಪಿಸಲು ಪ್ರಯತ್ನಿಸಿ.
- ಅಂತ್ಯದಲ್ಲಿ ಸಾಮಾನ್ಯವಾದ ಸಾಧಾರಣವಾದ ನಿರ್ಧಾರಕ್ಕೆ ಬರುವುದನ್ನು ಸಾಧ್ಯವಾದಷ್ಟು ಮಟ್ಟಿಗೆ ವಿರೋಧಿಸಿ ಮತ್ತು ತಕ್ಕ ಮಟ್ಟಿಗೆ----- ಮತ್ತು ತಾಂತ್ರಿಕ ಪದಗಳ ಬಳಕೆಯನ್ನು ಕಡಿಮೆಗೊಳಿಸಿ.
- ಅಗತ್ಯ ಕಂಡಲ್ಲಿ ಉದಾಹರಣೆಗಳನ್ನು ಸೇರಿಸಿ.
- ಖಂಡಿಕೆಯ ಮಧ್ಯ ಮತ್ತು ಖಂಡಿಕೆಗಳ ನಡುವೆ ಸಾಮ್ಯತೆ ಮತ್ತು ಸಮತೋಲನ ನಿರ್ವಹಿಸಿ.

➢ ಹಿಂದಿನ ಖಂಡಿಕೆಯ ಉಪಸಂಹಾರ ಮುಂದಿನ ಖಂಡಿಕೆಯ ಜೊತೆ ಸರಿದೂಗುವಂತೆ ಬರೆಯಿರಿ.

➢ ಅವಶ್ಯವಿರುವಲ್ಲಿ ಶೀರ್ಷಿಕೆಯನ್ನು ನೀಡಿ ಶೀರ್ಷಿಕೆ ಕೂಡ ವಿಷಯಕ್ಕೆ ಸಂಬಂಧಿಸಿದಾಗಿದ್ದು, ವಿಷಯದ ಸಾರವನ್ನು ನೀಡುವುದಾಗಿರಬೇಕು.

➢ ನೀಡುವ ವಿಷಯದ ಪ್ರಮಾಣವನ್ನು ನಿರ್ಧರಿಸಿ

➢ ನಿಮ್ಮ ದೃಷ್ಟಿಕೋನದೊಂದಿಗೆ ಸೇರುವ ವಿಷಯಗಳನ್ನು ಪರಿವೀಕ್ಷಿಸಿ. ವಾದ ವಿವಾದಗಳೊಂದಿಗೆ ವಿಷಯಕ್ಕೆ ಸಂಬಂಧಿಸಿದಂತೆ ಅಗತ್ಯವೆನಿಸಿದಲ್ಲಿ ಚರ್ಚಿಸಿ, ಒದಗಿಸಿ.

➢ ಬರೆದಿರುವುದನ್ನು ಪುನಃ ಪುನಃ ಓದಿ, ಪರಿಷ್ಕರಿಸಿ, ಪರಿಶೀಲಿಸಿ.

**II ವರ್ಣನೆ:**

ಸಂಭಾಷಣೆಗಳ ವಿಷಯ, ರಚನೆ ನೇರ ಹಾಗೂ ದಿಟ್ಟವಾಗಿ ಇರಲಿ ಪಾತ್ರಗಳಿಗೆ ತಕ್ಕ ಹಾಗೆ ಭಾಷೆಯ ವಿಧಗಳ ಬಳಕೆಯಾಗಲಿ

**III ವಿವರಣೆ:** ಹಾಗೂ ವರ್ಣನೆ ಸಭಿಕರನ್ನು ಓದುಗರನ್ನು ಆಕರ್ಷಿಸುವಂತಿರಬೇಕು. ಅವರು ತಮ್ಮನ್ನು ತಾವೆ ವಿಷಯಲ್ಲಿ ಅಳವಡಿಸಿಕೊಳ್ಳಬೇಕು. ಆಯ್ಕೆಗೊಂಡ ವಿಷಯ ಭಾಷೆ ಸಮಾಜ ಸಂಸ್ಕೃತಿಯನ್ನು ಬಿಟ್ಟು ಹೊರ ಹೋಗದಂತೆ ನಿರೂಪಿಸಬೇಕು. ನೀತಿ, ನೈತಿಕತೆ, ಸೈಧ್ಯಾಂತಿಕತೆಯ ನೆಲಗಟ್ಟಿನ ಮೇಲೆ ಒಳ್ಳೆಯ ಲೇಖನ ರೂಪಿತಗೊಳ್ಳಬೇಕು ಬರವಣಿಗೆಯಲ್ಲಿ ಪಾಲಿಸಬೇಕಾದ ಕೆಲವು ಮಾಡಬೇಕಾದವುಗಳು ಹಾಗೂ ಕೆಲವು ಮಾಡಬಾರದವುಗಳು.

೧) ಪ್ರಪ್ರಥಮವಾಗಿ ಭಾಷಿಕ ಶೈಲಿಯನ್ನು ಆಯ್ಕೆ ಮಾಡಿಕೊಳ್ಳಿ ಅದಕ್ಕೆ ಬದ್ಧರಾಗಿ ಮುಂದುವರೆಯಿರಿ (ಎ ಖ ಈಙಙಞ) ಭಾಷೆ ಸಂಧರ್ಭಕ್ಕೆ ತಕ್ಕದ್ದಾಗಿರಬೇಕು.

೨) ಸರಳ ಪರಿಣಾಮಕಾರಕಲ ಓದುವಿಕೆಗಾಗಿ ಭಾಷಿಕ ಚಿಹ್ನೆಗಳನ್ನು ಸೂಕ್ತವಾದ ಸ್ಥಳಗಳಲ್ಲಿ ಬಳಸಿ ಪದಗಳ ಮಧ್ಯ ವಿರಾಮ ಒತ್ತು, ತಾನವನ್ನು ಕಾಪಾಡಿ.

೩) ಸಾಧ್ಯವಾದಷ್ಟು ಸರಳ ವಾಕ್ಯಗಳನ್ನು ಬಳಸಿ ಮಿಶ್ರ ಹಾಗೂ ಸಂಕೀರ್ಣ ವಾಕ್ಯಗಳ ಬಳಕೆ ತಡೆಯಿರಿ ಮಿಶ್ರ ವಾಕ್ಯಗಳ ಬಳಕೆಯನ್ನು ನಿಬಂಧಿಸಿ.

೪) ಬರವಣಿಗೆಗೆ ಸೂಕ್ತವಾದ ಬರವಣಿಗೆಯ ವಿಧವನ್ನು ಆಯ್ಕೆಮಾಡಿಕೊಳ್ಳಿ ನಿರ್ಧಿಷ್ಟ ಬರವಣಿಗೆಗೆ ಬೇಕಾದ ಶೈಲಿಯನ್ನು ಓದಿ ನಿರ್ದಿಷ್ಟ ಪಡಿಸಿಕೊಳ್ಳಬೇಕು.

**ಉದಾ:** ೧) ಕೆಲಸಕ್ಕೆ ಅರ್ಜಿ

೨) ಅನುಮತಿ

ಅನುಮೋದನೇ

ವೈಯುಕ್ತಿಕ

ಜಾಹೀರಾತು

ಕಚೇರಿ ವ್ಯವಹಾರಕ್ಕೆ ಸಂಬಂಧಿ

೩) ವಿಷಯಾಧರಿತ ಲೇಖನ ಬರವಣಿಗೆಗಳು ವಿಷಯವನ್ನು ಬಿಟ್ಟು ಹೊರ ಹೋಗಬಾರದು. ವಿಷಯಕ್ಕೆ ಸಂಬಂಧಿಸಿದ ವಿಷಯಗಳನ್ನು ನಿದರ್ಶನಗಳನ್ನು ಉದಾಹರಣೆಗಳನ್ನು ಇತ್ಯಾದಿಗಳನ್ನು ಹೊಂದಿರಬೇಕು. ವಿಷಯವನ್ನು ಸರಳವಾಗಿ ಅರ್ಥಮಾಡಿಕೊಳ್ಳಲು ಇವುಗಳಿಗೆ ಸಂಬಂಧಿಸಿದ ಪೂರಕ ಸಾಮಾಗ್ರಿಗಳನ್ನು ಒದಗಿಸಬೇಕು.

**ಅಧ್ಯಯನ:**

ಈ ಎಲ್ಲವೂಗಳನ್ನು ಆಧರಿಸಿ ಬರೆಯುವ ಬರವಣಿಗೆ ಒಂದು ನಿರ್ಧಿಷ್ಟ ಉದ್ದೇಶವನ್ನು ಹೊಂದಿರುವುದಾಗಿರುತ್ತದೆ. ಆ ಉದ್ದೇಶದ ಪರಿಪೂರ್ಣತೆ ತಲುಪಲು ಬರವಣಿಗೆ ಈ ಕೆಳಕಂಡ ಸಾಮಾನ್ಯ ನಿಯಮಗಳನ್ನು ಪಾಲಿಸಬೇಕು.

೧) ಬರವಣಿಗೆಯ ಉದ್ದೇಶ ಪತ್ರವನ್ನು ಸಾಧ್ಯವಾಧ ಮಟ್ಟಿಗೆ ಸ್ಪಷ್ಟ ಪಡಿಸುವುದಾಗಿದೆ.
೨) ಪ್ರಸ್ತೂತ ಪಡಿಸುವ ವಿಚಾರಗಳು ನಿಖರತೆ ಮತ್ತು ಸಂಕ್ಷಿಪ್ತತೆಯನ್ನು ಹೊಂದಿರಬೇಕು
೩) ದ್ವಂದ್ವ ಮತ್ತು ---------- ನ್ನು ಸಾಧ್ಯವಾದಷ್ಟು ಮಟ್ಟಗೆ ದೂರವಿಡಿ
೪) ಬರವಣಿಗೆ ವ್ಯಾಕರಣಾತ್ಮಕವಾಗಿ/ವ್ಯಾಕರಣ ನಿಯಮಗಳನ್ನು ಒಳಗೊಂಡಿರಲಿ ಹಾಗೂ ಬರವಣಿಗೆ ಶುದ್ಧವಾಗಿರಲಿ
೫) ಬರವಣಿಗೆಯಲ್ಲಿ ಲೇಖನ ಚಿನ್ಹೆಗಳ ಬಳಕೆ ಅವಶ್ಯ, ಅರ್ಥ ವಿಜ್ಞಾನದ ದೃಷ್ಟಿಯಿಂದ ಅವಶ್ಯವಿರುವಲ್ಲಿ ಸರಿ ಅರ್ಥಕೊಡುವ ಪದಗಳ ಬಳಕೆ ಯತ್ತ ಗಮನ ಕೊಡಿ.

**ಪಾಠ ಒಂದು**

ಬರಣಿಗೆ ಒಂದು ನಿರ್ಧಿಷ್ಟ ಭಾಷಿಕ ನಿಯಮಗಳ ಪಾಲನೆ ಪ್ರತಿಯೊಂದು ಭಾಷೆಯೂ ತನ್ನದೆಯಾದ ಒಂದು ನಿರ್ಧಿಷ್ಟ ಶೈಲಿಯನ್ನು ಹೊಂದಿರುತ್ತದೆ. ಅಂದರೆ ಭಾಷೆಯ ಭೌತಿಕ ರೂಪ ಭಾಷೆಯನ್ನು ಮಾತನಾಡುವವರು ತಮ್ಮದೇಯಾದ ಒಂದು ಶೈಲಿಯನ್ನು ರೂಢಿಸಿಕೊಂಡಿರುತ್ತಾರೆ. ಔಪಚಾರಿಕ ಶಿಕ್ಷಣದ ಹಂತದಲ್ಲಿ ವಿದ್ಯಾರ್ಥಿಗಳಿಗೆ ಅಕ್ಷರ ಜ್ಞಾನವನ್ನು ನೀಡಲಾಗಿರುತ್ತದೆ. ಪ್ರತಿಯೊಂದು ಭಾಷೆಯಲ್ಲಿಯೂ ಬರವಣಿಗೆ – ಒತ್ತಕ್ಷರ, – ಪದಗಳ ಜೋಡಣಖೆ ಇತ್ಯಾದಿ– ಇದು ಸಾರ್ವತ್ರಿಕವಾದುದಲ್ಲ. ಇದು ಭಾಷೆಗೆ ಸೀಮಿತವಾದದ್ದು.